# ಸಂಧಿಗಳು

ಕನ್ನಡ ಸಂಧಿಗಳು

ಸಂಧಿಯಾಗುವ ಎರಡು ಪದಗಳಲ್ಲಿ ಒಂದು ಕನ್ನಡ ಪದವಾಗಿದ್ದು ಮತ್ತೊಂದು ಕನ್ನಡ ಪದ ಅಥವಾ ಸಂಸ್ಕೃತ ಪದವಾಗಿದ್ದರೂ ಅದು ಕನ್ನಡ ಸಂಧಿಯಾಗುತ್ತದೆ.

ಕನ್ನಡದಲ್ಲಿ ಒಟ್ಟು ಮೂರು ಸಂಧಿಗಳಿವೆ.

ಸಂಸ್ಕೃತ ಸಂಧಿಗಳು

| | |
|---|---|
| ಸ್ವರ ಸಂಧಿಗಳು | 1. ಲೋಪಸಂಧಿ |
| | 2. ಆಗಮಸಂಧಿ |
| ವ್ಯಂಜನ ಸಂಧಿಗಳು | 3. ಆದೇಶಸಂಧಿ |

# ಸಂಧಿಗಳು

ಕನ್ನಡ ಸಂಧಿಗಳು

ಸಂಸ್ಕೃತ ಸಂಧಿಗಳು

ಸಂಧಿಯಾಗುವ ಎರಡು ಪದಗಳಲ್ಲಿ ಎರಡೂ ಪದಗಳು ಸಂಸ್ಕೃತ ಪದಗಳಾಗಿದ್ದರೆ ಅದು ಸಂಸ್ಕೃತ ಸಂಧಿಯಾಗುತ್ತದೆ. ಸ್ವರಕ್ಕೆ ಸ್ವರ ಪರವಾದರೆ ಸ್ವರಸಂಧಿ, ವ್ಯಂಜನಕ್ಕೆ ವ್ಯಂಜನ ಪರವಾದರೆ ವ್ಯಂಜನ ಸಂಧಿಯಾಗುತ್ತದೆ.

| | |
|---|---|
| ಸ್ವರ ಸಂಧಿಗಳು | 1. ಸವರ್ಣದೀರ್ಘಸಂಧಿ |
| | 2. ಗುಣಸಂಧಿ |
| | 3. ವೃದ್ಧಿಸಂಧಿ |
| | 4. ಯಣ್‌ಸಂಧಿ |
| ವ್ಯಂಜನ ಸಂಧಿಗಳು | 1. ಜಶ್ತ್ವಸಂಧಿ |
| | 2. ಶ್ಚುತ್ವಸಂಧಿ |
| | 3. ಅನುನಾಸಿಕ ಸಂಧಿ |

# ಕನ್ನಡ ಸಂಧಿಗಳು

ಲೋಪಸಂಧಿ

ಆಗಮಸಂಧಿ

ಆದೇಶಸಂಧಿ

ಸ್ವರದ ಮುಂದೆ ವ್ಯಂಜನ ಬಂದು ಸಂಧಿಯಾಗುವಾಗ ಉತ್ತರ ಪದದ ಮೊದಲಿಗೆ ಇರುವ ಕ, ತ, ಪ ಗಳಿಗೆ ಗ, ದ, ಬ ಗಳು ಆದೇಶ ಆಗುವುದನ್ನು ಆದೇಶಸಂಧಿ ಎನ್ನುವರು.

**ಉದಾಹರಣೆ**

| | |
|---|---|
| ಮಳೆ + ಕಾಲ = ಮಳೆಗಾಲ | ಕ ಬದಲು ಗ ಆದೇಶವಾಗಿದೆ. |
| ಹೊಸ + ಕನ್ನಡ = ಹೊಸಗನ್ನಡ | ಕ ಬದಲು ಗ ಆದೇಶವಾಗಿದೆ. |
| ಹೂ + ತೋಟ = ಹೂದೋಟ | ತ ಬದಲು ದ ಆದೇಶವಾಗಿದೆ. |
| ಬೆಟ್ಟ + ತಾವರೆ = ಬೆಟ್ಟದಾವರೆ | ತ ಬದಲು ದ ಆದೇಶವಾಗಿದೆ. |
| ಮನೆ + ಕೆಲಸ = ಮನೆಗೆಲಸ | ಕ ಬದಲು ಗ ಆದೇಶವಾಗಿದೆ. |
| ಕೈ + ತಪ್ಪು = ಕೈದಪ್ಪು | ತ ಬದಲು ದ ಆದೇಶವಾಗಿದೆ. |

# ಕನ್ನಡ ಸಂಧಿಗಳು

ಲೋಪಸಂಧಿ

ಆಗಮಸಂಧಿ

ಆದೇಶಸಂಧಿ

ಸ್ವರದ ಮುಂದೆ ಸ್ವರವು ಬಂದು ಸಂಧಿಯಾಗುವಾಗ ಪದದ ಅರ್ಥ ಕೆಡದೆ ಪೂರ್ವ ಪದದಲ್ಲಿರುವ ಸ್ವರವು ಬಿಟ್ಟುಹೋಗುವುದನ್ನು ಲೋಪಸಂಧಿ ಎನ್ನುವರು.

**ಉದಾಹರಣೆ**

| | |
|---|---|
| ಊರು + ಅಲ್ಲಿ = ಊರಲ್ಲಿ | ಪೂರ್ವ ಪದದ ಉ ಲೋಪವಾಗಿದೆ. |
| ನಾವು + ಎಲ್ಲ = ನಾವೆಲ್ಲ | ಪೂರ್ವ ಪದದ ಉ ಲೋಪವಾಗಿದೆ. |
| ಅವನ + ಊರು = ಅವನೂರು | ಪೂರ್ವ ಪದದ ಅ ಲೋಪವಾಗಿದೆ. |
| ಬೇರೆ + ಒಂದು = ಬೇರೊಂದು | ಪೂರ್ವ ಪದದ ಎ ಲೋಪವಾಗಿದೆ. |
| ಅಲ್ಲಿ + ಅಲ್ಲಿ = ಅಲ್ಲಲ್ಲಿ | ಪೂರ್ವ ಪದದ ಇ ಲೋಪವಾಗಿದೆ. |
| ಊರು + ಊರು = ಊರೂರು | ಪೂರ್ವ ಪದದ ಉ ಲೋಪವಾಗಿದೆ. |

# ಸಂಸ್ಕೃತ ಸಂಧಿಗಳು

| ಸವರ್ಣದೀರ್ಘ | ಗುಣ ಸಂಧಿ | ವೃದ್ಧಿಸಂಧಿ | ಯಣ್‌ಸಂಧಿ | ಜತ್ತ್ವಸಂಧಿ | ಶ್ಚುತ್ವಸಂಧಿ | ಅನುನಾಸಿಕ |
|---|---|---|---|---|---|---|

ಇ,ಈ,ಉ,ಊ,ಋ ಕಾರಗಳಿಗೆ ಸವರ್ಣವಲ್ಲದ ಸ್ವರ ಪರವಾದರೆ ಇ,ಈ ಕಾರಗಳಿಗೆ 'ಯ್' ಕಾರ, ಉ,ಊ ಕಾರಗಳಿಗೆ 'ವ್' ಕಾರ, ಋ ಕಾರಕ್ಕೆ 'ರ್' ಕಾರ ಆದೇಶವಾಗಿ ಬರುವುದನ್ನು ಯಣ್‌ಸಂಧಿ ಎನ್ನುವರು.

| | |
|---|---|
| ಅತಿ + ಅವಸರ = ಅತ್ಯವಸರ | ಪೂರ್ವ ಪದದ ಇ ಕಾರಕ್ಕೆ 'ಯ್' ಕಾರ ಆದೇಶವಾಗಿ ಬಂದಿದೆ. |
| ಮನು + ಆದಿ = ಮನ್ವಾದಿ | ಪೂರ್ವಪದದ ಉ ಕಾರಕ್ಕೆ 'ವ್' ಕಾರ ಆದೇಶವಾಗಿ ಬಂದಿದೆ. |
| ಪಿತೃ + ಅರ್ಥ = ಪಿತ್ರರ್ಥ | ಪೂರ್ವಪದದ ಋ ಕಾರಕ್ಕೆ 'ರ್' ಕಾರ ಆದೇಶವಾಗಿ ಬಂದಿದೆ. |

# ಸಂಸ್ಕೃತ ಸಂಧಿಗಳು

ಸವರ್ಣದೀರ್ಘ | ಗುಣಸಂಧಿ | ವೃದ್ಧಿಸಂಧಿ | ಯಣ್‌ಸಂಧಿ | ಜತ್ತ್ವಸಂಧಿ | ಶ್ಚುತ್ವಸಂಧಿ | ಅನುನಾಸಿಕ

ಅಆ ಕಾರಗಳಿಗೆ ಇಈ ಕಾರಗಳು ಪರವಾದರೆ ಅವೆರಡರ ಸ್ಥಾನದಲ್ಲಿ ಏ ಕಾರವೂ, ಉಊ ಪರವಾದರೆ ಅವೆರಡರ ಸ್ಥಾನದಲ್ಲಿ ಓ ಕಾರವೂ, ಋಕಾರ ಪರವಾದರೆ ಅವೆರಡರ ಸ್ಥಾನದಲ್ಲಿ ಅರ್ ಕಾರವೂ ಆದೇಶವಾಗಿ ಬರುವುದನ್ನು ಗುಣಸಂಧಿ ಎನ್ನುವರು.

| | |
|---|---|
| ಸುರ + ಇಂದ್ರ = ಸುರೇಂದ್ರ | ಪೂರ್ವಪದದ ಅ ಮತ್ತು ಉತ್ತರ ಪದದ ಇ ಸೇರಿ ಏ ಕಾರ ಆದೇಶವಾಗಿ ಬಂದಿದೆ. |
| ಮಹಾ + ಈಶ್ವರ = ಮಹೇಶ್ವರ | ಪೂರ್ವಪದದ ಆ ಮತ್ತು ಉತ್ತರ ಪದದ ಈ ಸೇರಿ ಏ ಆದೇಶವಾಗಿ ಬಂದಿದೆ. |
| ಮಹಾ + ಋಷಿ = ಮಹರ್ಷಿ | ಪೂರ್ವಪದದ ಆ ಮತ್ತು ಉತ್ತರ ಪದದ ಋ ಸೇರಿ ಅರ್(ರ್) ಆದೇಶವಾಗಿ ಬಂದಿದೆ. |

# ಸಂಸ್ಕೃತ ಸಂಧಿಗಳು

| ಸವರ್ಣದೀರ್ಘ | ಗುಣ ಸಂಧಿ | ವೃದ್ಧಿಸಂಧಿ | ಯಣ್‌ಸಂಧಿ | ಜತ್ತ್ವಸಂಧಿ | ಶ್ಚುತ್ವಸಂಧಿ | ಅನುನಾಸಿಕ |
| --- | --- | --- | --- | --- | --- | --- |

ವರ್ಗದ ಪ್ರಥಮ ಅಕ್ಷರಗಳಿಗೆ ಅನುನಾಸಿಕ ಅಕ್ಷರಗಳು ಪರವಾದಾಗ ಅದೇ ವರ್ಗದ ಅನುನಾಸಿಕ ವ್ಯಂಜನಗಳು ಆದೇಶವಾಗಿ ಬರುವುದನ್ನು ಅನುನಾಸಿಕ ಸಂಧಿ ಎನ್ನುವರು.

ಕ್ – ಙ
ಚ್ – ಞ
ಟ್ – ಣ
ತ್ – ನ
ಪ್ – ಮ

- ಚಿತ್ + ಮೂಲ = ಚಿನ್ಮೂಲ
- ಸತ್ + ಮಣಿ = ಸನ್ಮಣಿ
- ಷಟ್ + ಮಾಸ = ಷಣ್ಮಾಸ
- ವಾಕ್ + ಮಾಧುರ್ಯ = ವಾಙ್ಮಾಧುರ್ಯ
- ಚಿತ್ + ಮಯ = ಚಿನ್ಮಯ

ಪೂರ್ವ ಪದದ ಕೊನೆಯ ಅಕ್ಷರದ ಬದಲಿಗೆ ಅದರದೇ ಅನುನಾಸಿಕ ಅಕ್ಷರ ಆದೇಶವಾಗಿ ಬರುತ್ತದೆ.

# ಸಂಸ್ಕೃತ ಸಂಧಿಗಳು

| ಸವರ್ಣದೀರ್ಘ | ಗುಣ ಸಂಧಿ | ವೃದ್ಧಿಸಂಧಿ | ಯಣ್‌ಸಂಧಿ | ಜಶ್ತ್ವಸಂಧಿ | ಶ್ಚುತ್ವಸಂಧಿ | ಅನುನಾಸಿಕ |
|---|---|---|---|---|---|---|

ಪೂರ್ವ ಪದದ ಕೊನೆಯಲ್ಲಿರುವ ಕಚಟತಪ ವ್ಯಂಜನಗಳಿಗೆ ಯಾವುದೇ ಅಕ್ಷರ ಪರವಾದರೂ ಅದೇ ವರ್ಗದ ಮೂರನೇ ವ್ಯಂಜನಾಕ್ಷರಗಳು ಆದೇಶವಾಗಿ ಬರುವುದನ್ನು ಜಶ್ತ್ವಸಂಧಿ ಎನ್ನುವರು.

ಕ – ಗ
ಚ – ಜ
ಟ – ಡ
ತ – ದ
ಪ – ಬ

ವಾಕ್ + ದಾನ = ವಾಗ್ದಾನ

ದಿಕ್ + ಅಂತ = ದಿಗಂತ

ಸತ್ + ಭಾವನೆ = ಸದ್ಭಾವನೆ

ಚಿತ್ + ಆನಂದ = ಚಿದಾನಂದ

ಬೃಹತ್ + ಆಕಾರ = ಬೃಹದಾಕಾರ

ಕಚಟತಪ ಗಳಿಗೆ ಯಾವುದೇ ವರ್ಗದ ಮೊದಲ ಎರಡು ಅಕ್ಷರಗಳು, ಸ, ಷ ಗಳು ಪರವಾದರೆ ಜಶ್ತ್ವಸಂಧಿ ಆಗುವುದಿಲ್ಲ.

ದಿಕ್ + ಪತಿ = ದಿಕ್ಪತಿ

ಷಟ್ + ಪದಿ = ಷಟ್ಪದಿ

ಸತ್ + ಸಂಗ = ಸತ್ಸಂಗ

# ಸಂಸ್ಕೃತ ಸಂಧಿಗಳು

| ಸವರ್ಣದೀರ್ಘ | ಗುಣ ಸಂಧಿ | ವೃದ್ಧಿಸಂಧಿ | ಯಣ್‌ಸಂಧಿ | ಜತ್ತ್ವಸಂಧಿ | ಶ್ಚುತ್ವಸಂಧಿ | ಅನುನಾಸಿಕ |
|---|---|---|---|---|---|---|

ಸ ಮತ್ತು ತ ವರ್ಗದ ಅಕ್ಷರಗಳಿಗೆ ಶ ಮತ್ತು ಚ ವರ್ಗದ ಅಕ್ಷರಗಳು ಪರವಾದಾಗ ಸ ಕಾರಕ್ಕೆ ಬದಲಾಗಿ ಶ ಕಾರ ಮತ್ತು ತ ವರ್ಗದ ಅಕ್ಷರಗಳಿಗೆ ಚ ವರ್ಗ ಆದೇಶಗಳಾಗಿ ಬರುವುದನ್ನು ಶ್ಚುತ್ವಸಂಧಿ ಎನ್ನುವರು.

| | | | | |
|---|---|---|---|---|
| ಸ | + | ಶ | = | ಶ |
| ತ | | ಚ | | ಚ |
| ಥ | | ಛ | | ಛ |
| ದ | | ಜ | | ಜ |
| ಧ | | ಝ | | ಝ |

- ಪಯಸ್ + ಶಯನ = ಪಯಶ್ಶಯನ
- ಮನಸ್ + ಚಂಚಲ = ಮನಶ್ಚಂಚಲ
- ಶರತ್ + ಚಂದ್ರ = ಶರಚ್ಚಂದ್ರ
- ಜಗತ್ + ಜ್ಯೋತಿ = ಜಗಜ್ಜ್ಯೋತಿ
- ಮನಸ್ + ಚಾಪಲ್ಯ = ಮನಶ್ಚಾಪಲ್ಯ

# ಸಂಸ್ಕೃತ ಸಂಧಿಗಳು

| ಸವರ್ಣದೀರ್ಘ | ಗುಣ ಸಂಧಿ | ವೃದ್ಧಿಸಂಧಿ | ಯಣ್‌ಸಂಧಿ | ಜತ್ತ್ವಸಂಧಿ | ಶ್ಚುತ್ವಸಂಧಿ | ಅನುನಾಸಿಕ |
|---|---|---|---|---|---|---|

ಅ, ಆ ಕಾರಗಳಿಗೆ ಏ, ಐ ಕಾರಗಳು ಪರವಾದರೆ ಅವೆರಡರ ಸ್ಥಾನದಲ್ಲಿ ಐ ಕಾರವೂ, ಓ,ಔ ಕಾರಗಳು ಪರವಾದರೆ ಅವೆರಡರ ಸ್ಥಾನದಲ್ಲಿ ಔ ಕಾರವೂ ಆದೇಶಗಳಾಗಿ ಬರುವುದನ್ನು ವೃದ್ಧಿಸಂಧಿ ಎನ್ನುವರು.

| | |
|---|---|
| ಜನ + ಐಕ್ಯ = ಜನೈಕ್ಯ | ಪೂರ್ವಪದದ ಅ ಮತ್ತು ಉತ್ತರ ಪದದ ಐ ಸೇರಿ ಐ ಕಾರ ಆದೇಶವಾಗಿ ಬಂದಿದೆ. |
| ಲೋಕ + ಏಕ = ಲೋಕೈಕ | ಪೂರ್ವಪದದ ಅ ಮತ್ತು ಉತ್ತರ ಪದದ ಏ ಸೇರಿ ಐ ಆದೇಶವಾಗಿ ಬಂದಿದೆ. |
| ಘನ + ಔದಾರ್ಯ = ಘನೌದಾರ್ಯ | ಪೂರ್ವಪದದ ಅ ಮತ್ತು ಉತ್ತರ ಪದದ ಔ ಸೇರಿ ಔ ಆದೇಶವಾಗಿ ಬಂದಿದೆ. |

# *ಸಂಧಿಗಳು

ಎರಡು ಅಕ್ಷರಗಳು ಕಾಲವಿಳಂಬವಿಲ್ಲದೆ ಕೂಡುವುದಕ್ಕೆ "ಸಂಧಿ" ಎಂದು ಹೆಸರು.

1. ಸಂಧಿಯಾಗುವಾಗ ಸ್ವರದ ಮುಂದೆ ಸ್ವರ ಬಂದರೆ **ಸ್ವರಸಂಧಿ** ಎನ್ನುವರು.
2. ಸಂಧಿಯಾಗುವಾಗ ಸ್ವರದ ಮುಂದೆ ವ್ಯಂಜನ, ವ್ಯಂಜನದ ಮುಂದೆ ಸ್ವರ, ವ್ಯಂಜನದ ಮುಂದೆ ವ್ಯಂಜನ ಬಂದರೆ **ವ್ಯಂಜನಸಂಧಿ** ಎನ್ನುವರು.

ಸಂಧಿಗಳಲ್ಲಿ ಎರಡು ವಿಧಗಳು:-

**1.ಕನ್ನಡ ಸಂಧಿಗಳು**

**2.ಸಂಸ್ಕೃತ ಸಂಧಿಗಳು**

# 1).*ಕನ್ನಡ ಸಂಧಿಗಳು

ಕನ್ನಡ ಸಂಧಿಯಲ್ಲಿ **ಲೋಪಸಂಧಿ,ಆಗಮ ಸಂಧಿ ಮತ್ತು ಆದೇಶ ಸಂಧಿ** ಎಂದು ಮೂರು ವಿಧಗಳುಂಟು. ಲೋಪ ಮತ್ತು ಆಗಮ ಸಂಧಿಯನ್ನು ಕನ್ನಡದ ಸ್ವರಸಂಧಿ ಎಂದು ಮತ್ತು ಆದೇಶ ಸಂಧಿಯನ್ನು ಕನ್ನಡದ ವ್ಯಂಜನಸಂಧಿ ಎಂದು ಕರೆಯುತ್ತಾರೆ.

**ಉದಾಹರಣೆ: ಸ್ವರಸಂಧಿ = ಸ್ವರ+ ಸ್ವರ**

**ದೇವರಿಂದ= ದೇವರು + ಇಂದ(ಉ+ಇ)**

**ಕೆರೆಯನ್ನು= ಕೆರೆ + ಅನ್ನು(ವ+ಅ)**

**1.ಲೋಪಸಂಧಿ:**

ಸ್ವರದ ಮುಂದೆ ಸ್ವರವು ಬಂದು ಸಂಧಿಯಾಗುವಾಗ **ಪೂರ್ವ ಪದದಲ್ಲಿರುವ ಸ್ವರದ ಅರ್ಥವು ಕೆಡದಿದ್ದ ಪಕ್ಷದಲ್ಲಿ ಮಾತ್ರ** ಲೋಪವಾಗುವುದನ್ನು **ಲೋಪಸಂಧಿ** ಎನ್ನುವರು.
**ಉದಾಹರಣೆ:**

**ಊರನ್ನು**=ಊರು + ಅನ್ನು (ಉ+ಅ)

**ನೂರಾರು**=ನೂರು + ಆರು (ಉ+ಅ)

**ದೇವರಿಂದ**= ದೇವರು + ಇಂದ(ಉ+ಇ)

**ಮಾತಿಲ್ಲ**=ಮಾತು + ಇಲ್ಲ (ಉ+ ಇ)

**ಮಾಡಿಸು**=ಮಾಡು + ಇಸು (ಉ+ಇ)

**ನಿಮ್ಮೂರು**= ನಿಮ್ಮ +ಊರು (ಅ+ಊ)
**ನಮ್ಮೂರು**= ನಮ್ಮ +ಊರು(ಅ+ಊ)
**ನಾವೆಲ್ಲಾ**=ನಾವು+ ಎಲ್ಲಾ (ಉ+ಎ)
**ತನ್ನದೆಂಬಂತೆ**=ತನ್ನದು + ಎಂಬಂತೆ(ಉ+ಎ)
**ಹಿಡಿದೆಳೆ** =ಹಿಡಿದು + ಎಳೆ (ಉ+ಎ)
**ನೂಲೆಳೆ** =ನೂಲು +ಎಳೆ (ಉ+ಎ)
**ನೂರೆಂಟು**=ನೂರು + ಎಂಟು (ಉ+ ಎ)
**ಊರೊಳಗೆ** = ಊರು + ಒಳಗೆ (ಉ+ಒ)
**ಬೇರೊಂದು**= ಬೇರೆ + ಒಂದು (ಎ+ ಒ)
ಓಬ್ಬೊಬ್ಬ=ಒಬ್ಬ+ ಒಬ್ಬ (ಅ+ಒ)
**ಒಂದೊಂದು** = ಒಂದು + ಒಂದು (ಉ+ಒ)

2.ಆಗಮ ಸಂಧಿ:-

ಸ್ವರದ ಮುಂದೆ ಸ್ವರವು ಬಂದಾಗ ಲೋಪಸಂಧಿ ಮಾಡಿದರೆ ಅರ್ಥವು ಕೆಡವಂತಿದ್ದಲ್ಲಿ **ಆ ಎರಡು ಸ್ವರಗಳು ಮಧ್ಯದಲ್ಲಿ "ಯ್" ಕಾರ ಅಥವಾ "ವ್" ಕಾರವೂ ಹೊಸದಾಗಿ ಬಂದು ಸೇರುವುದನ್ನು ಆಗಮಸಂಧಿ ಎನ್ನುವರು**

**"ಯ್" ಕಾರಾಗಮಸಂಧಿ:-**

ಸಂಧಿಕಾರ್ಯವು ಮಾಡಿದಾಗ **"ಯ್"** ಕಾರ ಆಗಮವಾದರೇ **"ಯ್"ಕಾರಗಮಸಂಧಿ** ಎನ್ನುತ್ತಾರೆ.**ಉದಾಹರಣೆಗೆ:-**

ಕೆರೆ+ ಅಲ್ಲಿ=**ಕೆರೆಯಲ್ಲಿ** ಗಾಳಿ+ಅನ್ನು= **ಗಾಳಿಯನ್ನು**
ಕೈ+ ಅನ್ನು=**ಕೈಯನ್ನು**ಗಿರಿ+ ಅನ್ನು=**ಗಿರಿಯನ್ನು**
ಕೈ+ ಆಡಿಸು=**ಕೈಯಾಡಿಸು**ಬಿಸಿ+ಆಯ್ತು=**ಬಿಸಿಯಾಯ್ತು**
ಪರಿವೆ+ ಇಲ್ಲದೆ=**ಪರಿವೆಯಿಲ್ಲದೆ** ಮಳೆ+ ಇಂದ=**ಮಳೆಯಿಂದ**
ಮೇ+ಇಸು= **ಮೇಯಿಸು** ನುಡಿ +ಒಡನೆ=**ನುಡಿಯೊಡನೆ**

**"ವ್"ಕಾರಾಗಮಸಂಧಿ:-**

ಸಂಧಿಕಾರ್ಯವು ಮಾಡಿದಾಗ **"ವ್"ಕಾರ** ಆಗಮವಾದರೆ "ವ್"ಕಾರಗಮಸಂಧಿ ಎನ್ನುತ್ತೇವೆ.**ಉದಾಹರಣೆಗೆ:-**

ಮಗು+ಅನ್ನು=**ಮಗುವನ್ನು** ಹಸು+ ಅನ್ನು= **ಹಸುವನ್ನು**
ಗುರು +ಅನ್ನು=**ಗುರುವನ್ನು** ಮಾತೃ+ ಅನ್ನು= **ಮಾತೃವನ್ನು**
ಹೂ+ ಇಂದ=**ಹೂವಿಂದ** ಪೂ + ಇನ=**ಪೂವಿನ**

3.ಆದೇಶ ಸಂಧಿ:-

ಸಂಧಿಕಾರ್ಯ ನಡೆದಾಗ ಒಂದು ಅಕ್ಷರ ಹೋಗಿ ಮತ್ತೊಂದು ಅಕ್ಷರ ಬಂದರೆ ಅದನ್ನು ಆದೇಶ ಸಂಧಿ ಎನ್ನುತ್ತಾರೆ.ಸಾಮಾನ್ಯವಾಗಿ **"ಕತಪ"** ಗಳಿಗೆ **"ಗದಬ"** ಗಳು ಅನುಕ್ರಮವಾಗಿಆದೇಶವಾಗುವುದು. ಉದಾಹರಣೆಗೆ:-

**"ಕ" ಕಾರಕ್ಕೆ "ಗ"ಕಾರ ಆದೇಶ**

ಹರಿ+ ಕೋಲು= **ಹರಿಗೋಲು** ಕೈ +ಕನ್ನಡಿ=**ಕೈಗನ್ನಡಿ**
ಬರಿ + ಕನಸು =**ಬರಿಗನಸು** ಒಡ+ ಕೂಡಿ= **ಒಡಗೂಡಿ**
ಸಿರಿ+ ಕನ್ನಡ= **ಸಿರಿಗನ್ನಡ**ಕಣ್+ ಕೆಟ್ಟು=**ಕಂಗೆಟ್ಟು**
ಕೊನೆ+ ಕಾಣು= **ಕೊನೆಗಾಣು**ಹನಿ+ ಕೂಡು= **ಹನಿಗೂಡು**
ಕೈ + ಕನ್ನಡಿ= **ಕೈಗನ್ನಡಿ** ಮಳೆ+ ಕಾಲ=**ಮಳೆಗಾಲ**
ಹಳ+ಕನ್ನಡ =**ಹಳಗನ್ನಡ** ನುಡಿ +ಕೂಡು=**ನುಡಿಗೊಡು**

**"ತ"ಕಾರಕ್ಕೆ "ದ" ಕಾರ:-**

ಮೈ+ ತುಂಬಿ=**ಮೈದುಂಬಿ** ಮೈ+ತೊಳೆ=**ಮೈದೊಳೆ**
ಬೆಟ್ಟ+ತಾವರೆ=**ಬೆಟ್ಟದಾವರೆ**ಸರಿ+ತೂಗು= **ಸರಿದೂಗು**
ಕೆಳ+ತುಟಿ=**ಕೆಳದುಟಿ**ತಲೆ+ತೂಗಿದನು=**ತಲೆದೂಗಿದನು**
ಬೆಳು+ ತಿಂಗಳು=**ಬೆಳದಿಂಗಳೂ**

**"ಪ"ಕಾರಕ್ಕೆ "ಬ" ಕಾರ:-**

ಕಣ್ + ಪನಿ=**ಕಂಬನಿ**ಸುಖ+ಪಡು= **ಸುಖಬಡು**
ಪೂ+ ಪುಟ್ಟಿ= **ಪೂಬುಟ್ಟಿ** ಹೂ+ಪುಟ್ಟಿ= **ಹೂಬುಟ್ಟಿ**
ಬೆನ್+ಪತ್ತು= **ಬೆಂಬತ್ತು**

ಸಾಮಾನ್ಯವಾಗಿ ಉತ್ತರ ಪದದ ಮೊದಲಕ್ಷರ **ಪ,ಬ,ಮ ಗಳಿಗೆ** "ವ"ಕಾರವು ಆದೇಶವಾಗಿ ಬರುವುದನ್ನು ಸಹ **ಆದೇಶ ಸಂಧಿ** ಎಂದು ಕರೆಯುತ್ತಾರೆ.

**ಉದಾಹರಣೆಗೆ:-**

**'ಪ'ಕಾರಕ್ಕೆ 'ವ' ಕಾರ:-**

ನಡೆ+ ಪೆಣ= **ನಡೆವೆಣ**ಬಿಲ್+ಪಿಡಿ=**ಬಿಲ್ವಡಿ**
ಎಳ+ಪರೆ=**ಎಳವರೆ**ಬೆಮರ್+ಪನಿ=**ಬೆಮರ್ವನಿ**
ಬೇರ್ಡ+ಪೆರಸಿ=**ಬೇರ್ವೆಸಿ**

"ಬ" ಕಾರಕ್ಕೆ "ವ" ಕಾರ:-
ಎಳ್+ ಬಳ್ಳಿ= **ಎಳವಳ್ಳಿ** ತಲೆ+ಬೇನೆ=**ತಲೆವೇನೆ**
ಕಡು +ಬೆಳ್ಳು=**ಕಡುವೆಳ್ಳು**

**"ಮ" ಕಾರಕ್ಕೆ "ವ" ಕಾರ:-**
ನೆಲ+ಮನೆ=**ನೆಲವನೆ** ಮೇಲ್+ಮಾತು=**ಮೇಲ್ವಾತು**

ಸಾಮಾನ್ಯವಾಗಿ ಉತ್ತರ ಪದದ ಮೊದಲಕ್ಷರ "ಸ"ಕಾರವಿದ್ದಾಗ **ಚ,ಛ,ಜ,** ಕಾರವು ಆದೇಶವಾಗಿ ಬರುವುದನ್ನು ಸಹ **ಆದೇಶ ಸಂಧಿ** ಎಂದು ಕರೆಯುತ್ತಾರೆ. ಉದಾಹರಣೆಗೆ:-

"ಸ" ಕಾರಕ್ಕೆ " ಚ" ಕಾರ:-
ಇನ್+ ಸರ= **ಇಂಚರ** ನುಣ್+ ಸರ =**ನುಣ್ಚರ**

"ಸ" ಕಾರಕ್ಕೆ "ಛ" ಕಾರ:-
ನೂರ್+ ಸಾಸಿರ= **ನೂರ್ಛಾಸಿರ** , ಪದಿನೆಣ್+ ಸಾಸಿರಿ= **ಪದಿನೆಣ್ಛಾಸಿರಿ, ಇರ್ಛಾಸಿರ್**

"ಸ" ಕಾರಕ್ಕೆ "ಜ" ಕಾರ:-
ಹಿಂ+ ಸರಿ=ಹಿಂಜರಿ, ಮುನ್+ ಸೆರಗು=**ಮುಂಜೆರಗು, ಮುಂಜೊಡರ್**

# 2).*ಸಂಸ್ಕೃತ ಸಂಧಿಗಳು

ಸಂಸ್ಕೃತ ಸಂಧಿಗಳಲ್ಲಿ ಪ್ರಮುಖವಾಗಿ 7 ವಿಧಗಳುಂಟು ಇವುಗಳಲ್ಲಿ ಸವರ್ಣಧೀರ್ಘಸಂಧಿ, ಗುಣಸಂಧಿ, ವೃದ್ಧಿಸಂಧಿ, ಯಣ್‌ಸಂಧಿಗಳನ್ನು ಸಂಸ್ಕೃತ ಸ್ವರಸಂಧಿ ಎಂದು, ಜಸ್ತ್ವಸಂಧಿ, ಶ್ಚುತ್ವಸಂಧಿ, ಅನುನಾಸಿಕ ಸಂಧಿಗಳನ್ನು ಸಂಸ್ಕೃತ ವ್ಯಂಜನ ಸಂಧಿ ಗಳೆಂದು ಕರೆಯುತ್ತಾರೆ

1.ಸವರ್ಣ ದೀರ್ಘಸಂಧಿ:-

**ಒಂದೇ ಜಾತಿಯ ವರ್ಣಗಳು ಪರಸ್ಪರ ಪರವಾದಾಗ ಅದೇ ವರ್ಣವು ದೀರ್ಘವಾದರೆ** ಅದು ಸವರ್ಣದೀರ್ಘಸಂಧಿ ಎನಿಸುವುದು.
**ಉದಾಹರಣೆಗೆ:-**
**ದೇವ+ಅಸುರ = ದೇವಾಸುರ (ಅ+ಅ=ಆ)**
**ಏಕ+ ಅಕ್ಷಿ = ಏಕಾಕ್ಷಿ (ಅ+ಅ=ಆ)**

ಪ್ರೇಮ+ ಅಮೃತ =ಪ್ರೇಮಾಮೃತ (ಅ+ಅ=ಆ)
ಕಾರಣ +ಅಂತರ= ಕಾರಣಾಂತರ (ಅ+ಅ=ಆ)
ಅಂಗ + ಅಂಗ= ಅಂಗಾಂಗ (ಅ+ಅ=ಆ)
ರಾಜ+ ಆಶ್ರಯ= ರಾಜಾಶ್ರಯ (ಅ+ಅ=ಆ)
ಕಮಲ+ ಅಕ್ಷ= ಕಮಲಾಕ್ಷ (ಅ+ಅ=ಆ)
ದಿವ್ಯ+ ಅನುಭವ= ದಿವ್ಯಾನುಭವ (ಅ+ಅ=ಆ)
ಕೋಪ+ ಅಗ್ನಿ = ಕೋಪಾಗ್ನಿ (ಅ+ಅ=ಆ)
ಉದ್ಯೋಗ+ಅವಕಾಶ= ಉದ್ಯೋಗಾವಕಾಶ (ಅ+ಅ=ಆ)
ಶಸ್ತ್ರ + ಅಲಯ= ಶಸ್ತ್ರಾಲಯ (ಅ+ಅ=ಆ)
ರವಿ +ಇಂದ್ರ= ರವೀಂದ್ರ (ಇ+ಇ=ಈ)
ಹರಿ+ ಈಶ =ಹರೀಶ (ಇ+ಇ=ಈ)
ಲಕ್ಷ್ಮೀ +ಈಶ=ಲಕ್ಷ್ಮೀಶ (ಈ+ಈ=ಈ)
ಗುರು+ ಉಪದೇಶ =ಗುರೂಪದೇಶ (ಉ+ಉ=ಊ)
ವಧೂ+ ಉಪದೇಶ =ವಧೂಪದೇಶ (ಉ+ಉ=ಊ)
ಬಹು+ಉಪದೇಶ=ಬಹೂಪದೇಶ (ಊ+ಉ=ಊ)
ಕಟ್ಟು+ಉಕ್ತಿ= ಕಟೂಕ್ತಿ (ಉ+ಉ=ಊ)
ಗುರು+ಉಕ್ತಿ = ಗುರೂಕ್ತಿ (ಉ+ಉ=ಊ)

2.ಗುಣಸಂಧಿ:-

ಅ ಆ ಕಾರಗಳ ಮುಂದೆ ಇ ಈ ಕಾರಗಳು ಪರವಾದರೆ ಅವೆರೆಡರ ಸ್ಥಾನದಲ್ಲಿ "ಏ" ಕಾರವೂ, ಉ ಊ ಕಾರಗಳು ಪರವಾದರೆ ಅವೆರಡರ ಸ್ಥಾನದಲ್ಲಿ "ಓ" ಕಾರವೂ, ಋ ಕಾರವೂ ಪರವಾದರೆ ಅದರ ಸ್ಥಾನದಲ್ಲಿ "ಅರ್"ಕಾರವೂ ಆದೇಶಗಳಾಗಿ ಬರುತ್ತದೆ.ಇದಕ್ಕೆ ಗುಣಸಂಧಿ ಎಂದು ಹೆಸರು.

ಉದಾಹರಣೆಗೆ:-
ಅ, ಆ, ಕಾರಕ್ಕೆ ಇ,ಈ ಕಾರ ಪರವಾದರೆ 'ಏ' ಕಾರ ಆದೇಶ
ದೇವ+ ಈಶ =ದೇವೇಶ (ಅ+ಈ =ಏ)
ಮಹಾ+ ಈಶ= ಮಹೇಶ (ಅ+ಈ=ಏ)
ಗಿರಿಜಾ+ ಈಶ =ಗಿರಿಜೇಶ (ಅ+ಈ=ಏ)
ಉಮಾ+ ಈಶ = ಉಮೇಶ (ಅ+ಈ=ಏ)

ಅ. ಅ ಕಾರಕ್ಕೆ ಉ,ಊ ಕಾರ ಪರವಾದರೆ 'ಓ' ಕಾರ ಆದೇಶ
ನಿತ್ಯ+ಉತ್ಸವ =ನಿತ್ಯೋತ್ಸವ (ಅ+ಉ=ಓ)

ಸೂರ್ಯ+ ಉದಯ= ಸರ್ಯೋದಯ (ಅ+ಉ=ಓ)
ಚತುರ +ಉಕ್ತಿ= ಚತುರೋಕ್ತಿ (ಅ+ಉ=ಓ)
ಚಂದ್ರ+ ಉದಯ= ಚಂದ್ರೋದಯ (ಅ+ಉ=ಓ)
ಸ್ನಾತಕ+ ಉತ್ತರ= ಸ್ನಾತಕೋತ್ತರ (ಅ+ಉ=ಓ)
ಮಹಾ + ಉಪಕಾರ= ಮಹೋಪಕಾರ (ಅ+ಉ=ಓ)

ಆ. ಅ ಕಾರಕ್ಕೆ 'ಋ' ಕಾರ ಪರವಾದರೆ 'ಅರ್(ೞ)' ಕಾರ ಆದೇಶ
ಮಹ+ ಋಷಿ=ಮಹರ್ಷಿ (ಅ+ಋ=ಅರ್(ೞ))
ದೇವ+ ಋಷಿ=ದೇವರ್ಷಿ (ಅ+ಋ=ಅರ್(ೞ))

3.ವೃದ್ಧಿಸಂಧಿ:-

ಅ ಆ ಕಾರಗಳಿಗೆ ಏ ಐ ಕಾರಗಳು ಪರವಾದರೆ ಅವೆರಡರ ಸ್ಥಾನದಲ್ಲಿ 'ಐ' ಕಾರವೂ,ಓ, ಔ ಕಾರಗಳು ಪರವಾದರೆ ಅವೆರಡರ ಸ್ಥಾನದಲ್ಲಿ 'ಐ' ಕಾರವೂ, ಓ,ಔ ಕಾರಗಳು ಪರವಾದರೆ ಅವೆರಡರ ಸ್ಥಾನದಲ್ಲಿ 'ಔ' ಕಾರವೂ ಆದೇಶವಾಗಿ ಬರುವ ಸಂಧಿಯನ್ನು ವೃದ್ಧಿ ಸಂಧಿ ಎನ್ನುವರು. **ಉದಾಹರಣೆಗಳು:-**

ಅ. ಅ ಕಾರಕ್ಕೆ 'ಏ,ಐ' ಕಾರಗಳು ಪರವಾದರೆ 'ಐ' ಕಾರ ಆದೇಶ
ಏಕ+ ಏಕ= ಏಕೈಕ (ಅ+ಏ=ಐ)
ಲೋಕ+ ಏಕವೀರ (ಅ+ಏ=ಐ)
ಅಷ್ಟ+ಐಶ್ವರ್ಯ= ಅಷ್ಟೈಶ್ವರ್ಯ (ಅ+ಏ=ಐ)
ಭಾವ+ ಐಕ್ಯ =ಭಾವೈಕ್ಯ (ಅ+ಏ=ಐ)
ಶಿವ+ ಐಕ್ಯ = ಶಿವೈಕ್ಯ (ಅ+ಏ=ಐ)
ಜನ+ ಐಕ್ಯ= ಜನೈಕ್ಯ (ಅ+ಏ=ಐ)
ವಿದ್ಯಾ+ಐಶ್ವರ್ಯ=ವಿದ್ಯೈಶ್ವರ್ಯ (ಅ+ಏ=ಐ)

ಆ. ಅ ಕಾರಕ್ಕೆ 'ಓ,ಔ' ಕಾರಗಳು ಪರವಾದರೆ 'ಔ' ಕಾರ ಆದೇಶ
ಜಲ+ ಓಘ= ಜಲೌಘ (ಅ+ಓ=ಔ)
ವನ+ ಔಷಧ= ವನೌಷಧ (ಅ+ಓ=ಔ)
ಘನ+ ಔದಾರ್ಯ= ಘನೌದಾರ್ಯ (ಅ+ಓ=ಔ)
ಮಹಾ+ಔನ್ನತ್ಯ= ಮಹೌನ್ನತ್ಯ (ಅ+ಓ=ಔ)
ಮಹಾ+ಔಷಧ=ಮಹೌಷಧ (ಅ+ಓ=ಔ)
ಮಹಾ+ಔದಾರ್ಯ=ಮಹೌದಾರ್ಯ (ಅ+ಓ=ಔ)

4.ಯಣ್ ಸಂಧಿ:-

ಇ,ಈ,ಉ,ಊ,ಋ, ಕಾರಗಳಿಗೆ ಸವರ್ಣವಲ್ಲದ ಸ್ವರ ಪರವಾದರೆ ಇ,ಈ ಕಾರಗಳಿಗೆ 'ಯ್' ಕಾರವೂ, ಉ, ಊ ಕಾರಗಳಿಗೆ 'ವ್' ಕಾರವೂ, ಋ ಕಾರಕ್ಕೆ 'ರ್' ಆದೇಶಗಳಾಗಿ ಬರುತ್ತದೆ, ಇದಕ್ಕೆ ಯಣ್ ಸಂಧಿ ಎನ್ನುವರು. ಉದಾಹರಣೆಗೆ:-

ಇ. ಈ ಕಾರಕ್ಕೆ 'ಯ' ಕಾರ ಆದೇಶ
ಜಾತಿ +ಅತೀತ=ಜಾತ್ಯತೀತ (ಇ+ಅ=ಯ)
ಅತಿ+ ಅಂತ= ಅತ್ಯಂತ (ಇ+ಅ=ಯ)
ಪ್ರತಿ+ ಉತ್ತರ=ಪ್ರತ್ಯುತ್ತರ (ಇ+ಅ=ಯ)
ಅತಿ+ ಉತ್ತಮ=ಅತ್ಯುತ್ತಮ (ಇ+ಅ=ಯ)
ಭೂಮಿ+ ಅಂತರ್ಗತ= ಭೂಮ್ಯಂತರ್ಗತ (ಇ+ಅ=ಯ)
ಇತಿ +ಅದಿ= ಇತ್ಯಾದಿ (ಇ+ಅ=ಯ)
ಗತಿ+ ಅಂತರ=ಗತ್ಯಂತರ (ಇ+ಅ=ಯ)
ಅಧಿ+ ಆತ್ಮ=ಅಧ್ಯಾತ್ಮ (ಇ+ಅ=ಯ)

ಉ.ಊ ಕಾರಕ್ಕೆ 'ವ' ಕಾರ ಆದೇಶ
ಮನು+ ಅಂತರ= ಮನ್ವಂತರ (ಉ+ಅ=ವ)
ವಧೂ+ ಅನ್ವೇಷಣ= ವಧ್ವನ್ವೇಷಣ (ಉ+ಅ=ವ)
ಗುರು+ ಆಜ್ಞೆ =ಗುರ್ವಾಜ್ಞೆ (ಉ+ಆ=ವ)
ಮನು+ ಆದಿ=ಮನ್ವಾದಿ( ಊ+ಆ=ವ)

ಋ ಕಾರಕ್ಕೆ 'ರ್' ಕಾರ ಆದೇಶ
ಪಿತೃ +ಅರ್ಜಿತ=ಪಿತ್ರಾರ್ಜಿತ (ಋ+ಅ=ರ್)
ಕತೃ+ಅರ್ಥ=ಕರ್ತ್ರರ್ಥ (ಋ+ಅ=ರ್)
ಮಾತೃ+ ಅಂಶ=ಮಾತ್ರಂಶ (ಋ+ಅ=ರ್)

5.ಜಸ್ತ್ವಸಂಧಿ:-

ಪೂರ್ವಪದದ ಕೊನೆಯಲ್ಲಿರುವ ವರ್ಗದ ಪ್ರಥಮಾಕ್ಷರಗಳಿಗೆ ಯಾವ ವರ್ಣ ಎದುರಾದರೂ ಅದೇ ವರ್ಗದ ಮೂರನೇ ಅಕ್ಷರ ಆದೇಶವಾಗಿ ಬರುವುದು ಜಸ್ತ್ವಸಂಧಿ ಎನ್ನುವುದು. ಅಂದರೆ ಕ,ಚ,ಟ,ತ,ಪ ಗಳಿಗೆ ಆದೇಶವಾಗಿ ವರ್ಗದ ಗ,ಜ,ಡ,ದ,ಬ ಗಳು ಆದೇಶವಾಗುವುದು, ಉದಾಹರಣೆಗೆ:-

ವಾಕ್+ ದಾನ= ವಾಗ್ದಾನ, ವಾಕ್+ದೇವಿ= ವಾಗ್ದೇವಿ( ಕ್ ಗೆ, ಗ್ ಕಾರ)
ಅಚ್+ಅಂತ=ಅಜಂತ, ಅಚ್+ಆದಿ=ಅಜಾದಿ(ಚ್ ಗೆ.ಜ್ ಕಾರ)
ಷಟ್+ಅನನ=ಷಡಾನನ, ಷಟ್+ಅಂಗ=ಷಡಂಗ (ಟ್ ಗೆ,ಡ್ ಕಾರ)
ಸತ್ + ಆನಂದ=ಸದಾನಂದ, ಸತ್+ ಭಾವ=ಸದ್ಭಾವ(ತ್ ಗೆ,ದ್ ಕಾರ)
ಅಪ್+ಧಿ=ಅಬ್ಧಿ, ಅಪ್+ಜ= ಅಬ್ಜ(ಪ್ ಗೆ,ಬ್ ಕಾರ)

6.ಶ್ಚುತ್ವಸಂದಿ:-

ಪೂರ್ವಪದದ ಕೊನೆಯಲ್ಲಿ ಸಕಾರ ವಾಗಲೀ ತಕಾರ ವಾಗಲೀ ಇದ್ದು, ಉತ್ತರಪದದ ಮೊದಲಲ್ಲಿ ಕ್ರಮವಾಗಿ ಶಕಾರ ವಾಗಲೀ, ಚಕಾರ ವಾಗಲೀ ಬಂದರೆ ಅವುಗಳನ್ನು ಶ್ಚುತ್ವಸಂಧಿ ಎನ್ನುವರು.

ಉದಾಹರಣೆಗೆ:-

ಮನಸ್+ ಶುದ್ಧಿ =ಮನಶ್ಶುದ್ಧಿ ('ಸ್' ಕಾರಕ್ಕೆ 'ಶ್' ಕಾರ)
ಮನಸ್+ ಶಾಂತಿ=ಮನಶಾಂತಿ ('ಸ್' ಕಾರಕ್ಕೆ 'ಶ್' ಕಾರ)
ಯಶಸ್+ ಚಂದ್ರ= ಯಶಶ್ಚಂದ್ರ('ತ್' ಕಾರಕ್ಕೆ 'ಚ್' ಕಾರ)
ಬೃಹತ್+ ಛತ್ರ= ಬೃಹಚ್ಛತ್ರ ('ತ್' ಕಾರಕ್ಕೆ 'ಚ್' ಕಾರ)

7.ಅನುನಾಸಿಕ ಸಂಧಿ:-

ಪೂರ್ವಪದದ ಕೊನೆಯಲ್ಲಿ ಅಯಾ ವರ್ಗದ ಪ್ರಥಮಾಕ್ಷರಗಳು ಇದ್ದು ಅವುಗಳಿಗೆ ಅನುನಾಸಿಕ ಅಕ್ಷರಗಳು ಪರವಾದರೆ ಅದನ್ನು ಅನುನಾಸಿಕ ಸಂಧಿ ಎನ್ನುವರು. ಅಂದೆರ ಕ್,ಟ್,ತ್,ಪ್, ವ್ಯಂಜನಗಳಿಗೆ ಙ್,ಣ್,ನ್,ಮ್ ವ್ಯಂಜನಗಳು ಆದೇಶವಾಗುವುದು.

ಉದಾಹರಣೆಗೆ:-

ವಾಕ್+ ಮಯ=ವಾಙ್ಮಯ, ದಿಕ್+ಮೂಢ=ದಿಙ್ಮೂಢ (ಕ್ ಗೆ, ಙ್ ಕಾರ)
ಸತ್+ ಮಾನ=ಸನ್ಮಾನ, ಚಿತ್+ ಮಯ= ಚಿನ್ಮಯ (ತ್ ಗೆ, ನ್ ಕಾರ)
ಷಟ್+ ಮುಖ=ಷಣ್ಮುಖ, ಷಟ್ +ಮಾಸ= ಷಣ್ಮಾಸ (ಟ್ ಗೆ ಣ್ ಕಾರ)

ಅಪ್ +ಮಯ= ಅಮ್ಮಯ (ಪ್ ಗೆ,ಮ್ ಕಾರ)

**ಸಂಧಿಗಳು**

| ಕನ್ನಡ ಸಂಧಿ | | ಸಂಸ್ಕೃತ ಸಂಧಿಗಳು | |
|---|---|---|---|
| **ಸ್ವರ ಸಂಧಿ** | **ವ್ಯಂಜನ ಸಂಧಿ** | **ಸ್ವರ ಸಂಧಿ** | **ವ್ಯಂಜನ ಸಂಧಿ** |
| 1.ಲೋಪ ಸಂದಿ | 1.ಆದೇಶ ಸಂಧಿ | 1.ಸವರ್ಣದೀರ್ಘ ಸಂಧಿ | 1.ಜಸ್ತ್ವಸಂಧಿ |
| 2.ಆಗಮ ಸಂಧಿ | | 2.ಗುಣಸಂಧಿ | 2.ಶ್ಚುತ್ವಸಂಧಿ |
| | | 3.ವೃದ್ಧಿಸಂಧಿ | 3.ಅನುನಾಸಿಕ ಸಂಧಿ |
| | | 4.ಯಣ್‌ಸಂಧಿ ("ಯ" ಕಾರ, "ವ" ಕಾರ) | |

ಅಕ್ಷರ ಅಕಾಡೆಮಿ

ಈ ಸಂಧಿಗಳಲ್ಲಿ ಎರಡು ವಿಧಗಳಿವೆ. 1) ಕನ್ನಡ ಸಂಧಿ 2) ಸಂಸ್ಕೃತ ಸಂಧಿ

ಕನ್ನಡ ಪದಗಳೇ ಸೇರಿ ಅಥವಾ ಕನ್ನಡ ಮತ್ತು ಸಂಸ್ಕೃತ ಪದಗಳು ಸೇರಿ ಸಂಧಿಯಾದರೆ 'ಕನ್ನಡ ಸಂಧಿ'

ಎಂತಲೂ ಸಂಸ್ಕ್ರತ ಪದಗಳು ಸೇರಿ ಸಂಧಿಯಾದರೆ ಸಂಸ್ಕೃತಸಂಧಿ ಎಂತಲೂ ಕರೆಯಲ್ಪಡುತ್ತವೆ.

- ಕನ್ನಡ ಸಂಧಿ :

ಕನ್ನಡ ಸಂಧಿಗಳಲ್ಲಿ ಮೂರು ವಿಧಗಳು. ಅವುಗಳೆಂದರೆ ಲೋಪಸಂಧಿ ,ಆಗಮಸಂಧಿ ,ಆದೇಶ ಸಂಧಿ.

- ಲೋಪಸಂಧಿ:
  ನಾನು+ಇಲ್ಲ ಬೇರೆ+ಒಬ್ಬ=ಬೇರೊಬ್ಬ
  ಉ+ಇ= ಇ ಎ +ಒ= ಒ

ಇಲ್ಲಿ ಪೂರ್ವ ಪದದ ಅಂತ್ಯದಲ್ಲಿರುವ ಉ ಕಾರಕ್ಕೆ ಉತ್ತರ ಪದದ ಆದಿಯಲ್ಲಿರುವ ಇ ಕಾರವುಪರವಾಗಿ ಸಂಧಿಯಾದಾಗ ಪೂರ್ವ ಪದದ ಅಂತ್ಯದಲ್ಲಿರುವ ಉ ಕಾರವು ಲೋಪವಾಗಿರುವುದು ಕಂಡು ಬರುತ್ತದೆ.

- ಸೂತ್ರ : ಸಂಧಿಕಾರ್ಯ ಆಗುವಾಗ ಸ್ವರದ ಮುಂದೆ ಸ್ವರ ಬಂದು ಪೂರ್ವಪದದ ಸ್ವರ ಲೋಪವಾದರೆ ಅದು ಲೋಪಸಂಧಿ

ಉದಾ: ಊರಿಂದ, ಮುಚ್ಚಿಟ್ಟು, ಹೆಸರಾಗಿದೆ, ಒಬ್ಬೊಬ್ಬ, ನೀನಖಿಲ, ಅವನೊಬ್ಬ, ಉಸಿರಾಡು, ಊರೂರು ಬಲ್ಲೆನೆಂದು, ಮಾತಂತು, ಸಂಪನ್ನರಾದ, ಇರುಳಳಿದು, ತೆರೆದಿಕ್ಕುವ, ತಪ್ಪಲೀಯದೆ, ಕಾಣಲಾಗದು, ಲೇಖಿನವನೋದಿ, ತೆದೆದುತ್ತರೀಯಮಂ, ಬೇಡಬೆಡರಸುಗಳ, ನಿಂತಿರ್ದನು,ಕಾದಾಟದಾಟ,ಆದನೆಂದು

- ಆಗಮಸಂಧಿ :
  ಮನೆ+ಅಲ್ಲಿ=ಮನೆಯಲ್ಲಿ ನದಿ+ಇಂದ=ನದಿಯಿಂದ ಮಗು+ಅನ್ನು=ಮಗುವನ್ನು

ಇಲ್ಲಿ ಪೂರ್ವ ಪದ ಮತ್ತು ಉತ್ತರ ಪದದ ಆದಿಯಲ್ಲಿರುವ ಸ್ವರಗಳು ಸೇರಿ ಸಂಧಿಯಾದಾಗ 'ಯ' ಅಥವಾ 'ವ' ಎಂಬ ಅಕ್ಷರಗಳು ಹೊಸದಾಗಿ ಬಂದಿರುವುದು ಕಂಡು ಬರುತ್ತದೆ.

- ಸೂತ್ರ: ಸ್ವರದ ಮುಂದೆ ಸ್ವರ ಬಂದು ಸಂಧಿಯಾಗುವಾಗ 'ಯ' ಕಾರ ಅಥವಾ 'ವ' ಕಾರವು ಈ ಸ್ವರಗಳ ಮಧ್ಯೆ ಹೊಸದಾಗಿ ಬಂದು ಸೇರಿದರೆ ಅದು ಆಗಮ ಸಂಧಿ.
  ಉದಾಹರಣೆ: ಭೇಧವಿಲ್ಲ,ಕೈವಿಡಿದು,ವೃದ್ಧಿಯಾಗಿ,ಮನೆಯಲ್ಲಿ ,ನದಿಯಲ್ಲಿ,ನಗುವಿಗೆ,ವಧುವನ್ನು ಕೈಯನ್ನು,ಹೂವಿಂದ,ಹಸುವನ್ನು,ಮರವನ್ನು,ಶಾಲೆಯಿಂದ,ಕೆರೆಯಲ್ಲಿ ಇತ್ಯಾದಿ

- **ಆದೇಶ ಸಂಧಿ :**

  ಹುಲ್ಲು+ಕಾವಲು=ಹುಲ್ಲುಗಾವಲು ಮೈ+ತೊಳೆ=ಮೈದೊಳೆ ಕಣ್+ಪನಿ=ಕಂಬನಿ
  ಕಡು+ಪೇಳ್ವ =ಕಡುವೆಳ್ವ, ಮೆಲ್ +ಮಾತು=ಮೆಲ್ವಾತು

ಇಲ್ಲಿ ಸಂಧಿಯಾಗುವಾಗ ಉತ್ತರ ಪದದ ಆದಿಯಲ್ಲಿರುವ ಕ ಕಾರದ ಬದಲಿಗೆ ಗ ಕಾರವೂ, ತ ಕಾರದ ಬದಲಿಗೆ ದ ಕಾರವು ಆದೇಶವಾಗಿ ಬಂದಿದೆ.(ಅಂದರೆ ಒಂದು ಅಕ್ಷರದ ಬದಲಿಗೆ ಬೇರೊಂದು ಅಕ್ಷರ ಬಂದಿದೆ)

- ಸೂತ್ರ: ಸಂಧಿ ಕ್ರಿಯೆ ಆಗುವಾಗ ಉತ್ತರ ಪದದ ಆದಿಯಲ್ಲಿರುವ ವ್ಯಂಜನದ ಬದಲಿಗೆ ಬೇರೊಂದು ವ್ಯಂಜನ ಬಂದು ಸೇರುವುದೇ ಆದೇಶ ಸಂಧಿ ( ಕ ತ ಪ ಗಳಿಗೆ ಗ ದ ಬ ಗಳು ಕೆಲವೊಮ್ಮೆ ಪ ಬ ಮ ಗಳಿಗೆ ' ವ ' ಕಾರವೂ ಆದೇಶವಾಗಿ ಬರುತ್ತದೆ.)

ಉದಾ: ಬೆಂಬತ್ತು,ಕೆನೆವಾಲ್,ಕಂಬನಿ,ಬೆಟ್ಟದಾವರೆ,ತಲೆಗೂದಲು,ಬರಿಗನಸು,ಸಿರಿಗನ್ನಡ,ಹಳಗನ್ನಡ, ಹೊಸಗಾಲ ಹಗಲುಗನಸು,ಹುಲ್ಲುಗಾವಲು,ಮೈದೋರು,ಮಳೆಗಾಲ,ಚಳಿಗಾಲ,

- **ಪ್ರಕೃತಿ ಭಾವ :**

ಆ+ ಆಡು , ಅಯ್ಯೋ+ಇದೇನು , ಓಹೋ+ಅಜ್ಜಿ ಬಂದರೇ , ಅಕ್ಕಾ+ಇತ್ತಬಾ.

ಈ ಉದಾಹರಣೆಯನ್ನು ಗಮನಿಸಿದಾಗ ಸ್ವರದ ಮುಂದೆ ಸ್ವರ ಬಂದಿರುವುದರಿಂದ ಲೋಪ ಅಥವಾ ಆಗಮ ಸಂಧಿ ಆಗಬೇಕಿತ್ತು. ಹಾಗೆ ಸಂಧಿ ಮಾಡಿದರೆ ಅರ್ಥ ಕೆಡುತ್ತದೆ. ಹಾಗಾಗಿ ಸಂಧಿ ಮಾಡುವುದಿಲ್ಲ ಪ್ಲುತ ಸ್ವರದ ಮುಂದೆ ಸ್ವರ ಬಂದಾಗ :ಅಯ್ಯೋ,ಆಹಾ,ಓಹೋ ಮುಂತಾದ ಭಾವಸೂಚಕ ಅವ್ಯಯಗಳ ಮುಂದೆ ಸ್ವರ ಬಂದಾಗ ಹಾಗೂ ಆ ಎಂಬ ಪದದ ಮುಂದೆ (ಅಕ್ಷರದ ಮುಂದೆ ಅಲ್ಲ) ಸ್ವರ ಬಂದಾಗ ಸಂಧಿ ಮಾಡಬಾರದು .

- **ಸಂಸ್ಕೃತ ಸಂಧಿಗಳ ಸ್ಥೂಲ ವಿವರ :**

ಸಂಸ್ಕೃತ ಸಂಧಿಗಳಲ್ಲಿ ನಾಲ್ಕು ಸ್ವರ ಸಂಧಿಗಳು ಹಾಗೂ ಮೂರು ವ್ಯಂಜನ ಸಂಧಿಗಳಿವೆ. ಅವುಗಳೆಂದರೆ 1) ಸವರ್ಣಧೀರ್ಘಸಂಧಿ 2)ಗುಣಸಂಧಿ 3) ವೃದ್ದಿಸಂದಿ 4)ಯಣ್ ಸಂಧಿ 5) ಜಸ್ತ್ವ ಸಂಧಿ 6) ಶ್ಚುತ್ವ ಸಂಧಿ 7) ಅನುನಾಸಿಕ ಸಂಧಿ

- **ಸವರ್ಣ ದೀರ್ಘ ಸಂಧಿ:**

  1) ವಿದ್ಯಾಭ್ಯಾಸ ಮಾಡು . 2) ಗುರೂಪದೇಶವನ್ನು ಪಡೆ

ನಮೂದಿತ ಎರಡೂ ಹೇಳಿಕೆಗಳಲ್ಲಿರುವ ವಿದ್ಯಾಭ್ಯಾಸ, ಗುರೂಪದೇಶ ಪದಗಳನ್ನು ಗಮನಿಸಿ

ವಿದ್ಯಾ + ಅ ಭ್ಯಾ ಸ > ವಿದ್ಯಾ ಭ್ಯಾಸ

ದ್ + ಯ್+ಆ+ ಅ > ದ್+ಯ್ +ಆ

ಇಲ್ಲಿ ಪೂರ್ವಪದದ ಕೊನೆಯಲ್ಲಿರುವ ಆ ಸ್ವರದ ಮುಂದೆ ಉತ್ತರ ಪದದ ಆದಿಯಲ್ಲಿ ಅ ಸ್ವರ ಇರುವುದು ಇವೆರಡು ಸ್ವರಗಳು ಒಂದೇ ಸ್ಥಾನದಲ್ಲಿ ಹುಟ್ಟುವುದರಿಂದ ಇವು ಸವರ್ಣಗಳು. ಈ ಸವರ್ಣ ಸ್ವರಗಳು ಸಂಧಿಯಾದಾಗ ದೀರ್ಘಸ್ವರವಾಗಿ ಪರಿವರ್ತನೆಯಾಗುತ್ತದೆ.ಹಾಗಾಗಿ ಇದನ್ನು ಸವರ್ಣಧೀರ್ಘಸಂಧಿ ಎಂದು ಕರೆಯಲಾಗಿದೆ.

ಗುರು+ಉಪದೇಶ = ಗುರೂಪದೇಶ

ರ್+ಉ+ಉ > ರ್+ಊ

ಇಲ್ಲಿಯೂ ಎರಡು ಉ ಕಾರಗಳು ಸೇರಿ ಊ ಕಾರ ಆಗಿದೆ. ಹಾಗಾಗಿ ಇದು ಕೂಡಾ ಸವರ್ಣ ಧೀರ್ಘಸಂಧಿಗೆ ಉದಾಹರಣೆ

- ಸೂತ್ರ: ಸವರ್ಣಸ್ವರಗಳು ಒಂದರ ಮುಂದೆ ಒಂದು ಸೇರಿ ಸಂಧಿಯಾದಾಗ ಅವೆರಡರ ಸ್ಥಾನದಲ್ಲಿ ಅದೆ ಜಾತಿಯ ದೀರ್ಘಸ್ವರ ಆದೇಶವಾಗಿ ಬಂದರೆ ಅದನ್ನು ಸವರ್ಣಧೀರ್ಘಸಂಧಿ ಎಂದು ಕರೆಯುವರು.

ಉದಾ:

ಹರೀಶ, ಕವೀಂದ್ರ, ಮಂತ್ರಾಲಯ, ಕಾರ್ಯಾಲಯ, ಮಹಾತ್ಮ, ಗ್ರಂಥಾಲಯ, ಶಿವಾಲಯ, ದೇವಾಲಯ, ಏಕಾಕ್ಷ, ಹಿಮಾಚಲ, ಸ್ವರಾಚಲ, ರಾಜಾನ್ನ, ಕೋಪಾರುಣ, ಕಾಲಾಗ್ನಿ, ಗರ್ವಾಲಂಕೃತ, ಕೋಪಾರಕ್ತ,ಗಿರೀಶ,ಸುರಾಸುರ,ವಧೂಪೇತ,ಜಿನಾಲಯ,ಚಂದ್ರಾರ್ಕ ,ರಾಜೀವ,ಗುರೂಪದೇಶ

- ## ಗುಣಸಂಧಿ:

1) ದೇವೇಂದ್ರನ ಸಭೆ 2) ಅರುಣೋದಯವಾಯಿತು

ಇಲ್ಲಿರುವ ದೇವೇಂದ್ರ ಮತ್ತು ಅರುಣೋದಯ ಪದಗಳನ್ನು ಗಮನಿಸಿ

ದೇವ+ಇಂದ್ರ > ದೇವೇಂದ್ರ

ವ್+ಅ+ಇಂ > ವ್+ಏಂ

ಇಲ್ಲಿ ಪೂರ್ವ ಪದದ ಅಂತ್ಯದಲ್ಲಿರುವ ಅ ಕಾರಕ್ಕೆ ಉತ್ತರ ಪದದ ಆದಿಯಲ್ಲಿರುವ ಇ ಕಾರ ಸೇರಿ ಏ ಕಾರ ಆದೇಶವಾಗಿದೆ.

ಅರುಣ+ಉದಯ > ಅರುಣೋದಯ

ಣ್+ಅ+ಉ > ಣ್+ಓ

ಇಲ್ಲಿ ಪೂರ್ವ ಪದದ ಅಂತ್ಯದಲ್ಲಿರುವ ಅ ಕಾರಕ್ಕೆ ಉತ್ತರ ಪದದ ಆದಿಯಲ್ಲಿರುವ ಉ ಕಾರ ಸೇರಿ ಓ ಕಾರ ಆದೇಶವಾಗಿದೆ.

- ಸೂತ್ರ: ಅಆ ಕಾರಗಳಿಗೆ ಇಈ ಕಾರಗಳು ಪರವಾದರೆ ಅವೆರಡರ ಸ್ಥಾನದಲ್ಲಿ ಏ ಕಾರವೂ ಉಊ ಕಾರಗಳು ಪರವಾದರೆ ಓ ಕಾರವೂ ಋ ಕಾರ ಪರವಾದರೆ ಅರ್ ಕಾರವೂ ಆದೇಶವಾಗಿ ಬಂದರೆ ಅದು ಗುಣ ಸಂಧಿ.

-

ಉದಾಹರಣೆ:ಸೂರ್ಯೋದಯ,ಗಜೇಶ,ಸುರೇಶ,ಮಂಡಳೇಶ್ವರ,ಗಜೇಂದ್ರ,ಚಂದ್ರೋದಯ,ಮಹರ್ಷಿ ರಾಜರ್ಷಿ,ವಂಶೋದ್ಧಾರಕ,ಮಹೇಶ

- ವೃದ್ಧಿಸಂಧಿ:

ಅವನು ಏಕೈಕ ವೀರ   ಇಲ್ಲಿರುವ ಏಕೈಕ ಪದವನ್ನು ಗಮನಿಸಿ

ಏಕ + ಏಕ > ಏಕೈಕ

ಕ್+ಅ + ಏ > ಕ್+ಐ

ಇಲ್ಲಿ ಪೂರ್ವ ಪದದ ಅಂತ್ಯದಲ್ಲಿರುವ ಅ ಕಾರಕ್ಕೆ ಉತ್ತರ ಪದದ ಆದಿಯಲ್ಲಿರುವ ಏ ಕಾರವು ಪರವಾಗಿ ಸಂಧಿಯಾದಾಗ ಐ ಕಾರವು ಆದೇಶವಾಗಿ ಬರುತ್ತದೆ.

- ಸೂತ್ರ : 'ಅಆ' ಕಾರಗಳಿಗೆ 'ಏಐ'ಕಾರಗಳು ಪರವಾದಾಗ ಅವೆರಡರ ಸ್ಥಾನದಲ್ಲಿ 'ಐ'ಕಾರವೂ 'ಓಔ' ಕಾರಗಳು ಪರವಾದಾಗ 'ಔ' ಕಾರವು ಆದೇಶವಾಗಿ ಬಂದರೆ (ಐ,ಔ ಕಾರಗಳು ಆದೇಶವಾಗಿ ಬಂದರೆ) ಅದು ವೃದ್ಧಿ ಸಂಧಿ ಎನಿಸುವುದು.

ಉದಾ:

ಜನೈಕ್ಯ,ವನೌಷಧಿ,ಮಹೌದಾರ್ಯ,ಲೋಕೈಕವೀರ,ಭಾವೈಕ್ಯ,ಮಹೌನ್ನತ್ಯ,ಏಕೈಕ,ವನೌಷಧ,ಅಷ್ಟೈಶ್ವರ್ಯ

- ಯಣ್ ಸಂಧಿ:

ಅವನು ಅತ್ಯಂತ ಪರಾಕ್ರಮಿ   ಈ ವಾಕ್ಯದಲ್ಲಿರುವ ಅತ್ಯಂತ ಎಂಬ ಪದವನ್ನು ಗಮನಿಸಿ

ಅತಿ+ಅಂತ >ಅತ್ಯಂತ

ತ್+ಇ+ಅಂ >ತ್+ಯ್+ಅಂ

ಇಲ್ಲಿ ಪೂರ್ವ ಪದದ ಅಂತ್ಯದಲ್ಲಿರುವ ಇ ಕಾರಕ್ಕೆ ಉತ್ತರ ಪದದ ಆದಿಯಲ್ಲಿರುವ ಅಂ ಕಾರವು ಸೇರಿ ಸಂಧಿಯಾದಾಗ ಇ ಕಾರದ ಬದಲಿಗೆ ಯ್ ಕಾರ ಆದೇಶವಾಗಿದೆ.

- ಸೂತ್ರ: 'ಇ,ಈ,ಉ,ಊ,ಋ' ಕಾರಗಳಿಗೆ ಸವರ್ಣವಲ್ಲದ ಸ್ವರ ಪರವಾದರೆ 'ಇ,ಈ'ಕಾರಗಳಿಗೆ 'ಯ್'ಕಾರವೂ 'ಉ,ಊ'ಕಾರಗಳಿಗೆ 'ವ್' ಕಾರವೂ 'ಋ'ಕಾರಕ್ಕೆ 'ರ್' ಕಾರವೂ ಆದೇಶವಾಗಿ ಬಂದರೆ ಇದನ್ನು ಯಣ್ ಸಂಧಿ ಎನ್ನುವರು

ಉದಾ

ಅತ್ಯಂತ, ಇತ್ಯಾದಿ, ಗತ್ಯಂತರ, ಅಧ್ಯಾತ್ಮ, ಅತ್ಯವಸರ,ಗುರ್ವಾಜ್ಞೆ,ಅತ್ಯಮೂಲ್ಯ,ಕೋಟ್ಯಧೀಶ,ಮನ್ವಂತರ,ಪಿತ್ರರ್ಥ ಅತ್ಯುನ್ನತ, ಪ್ರತ್ಯುತ್ತರ,ಶಾಲ್ಯನ್ನ, ಪರ್ಯಾವಸಾನ,ಜಾತ್ಯಾತೀತ,ಮನ್ವಾದಿ,ಪಿತ್ರಾರ್ಜಿತ

ಸಂಸ್ಕೃತ ವ್ಯಂಜನ ಸಂಧಿಗಳ ಸ್ಥೂಲ ವಿವರ

- ಜಸ್ತ್ವ ಸಂಧಿ :

ಷಣ್ಮುಕನಿಗೆ ಷಡಾನನ ಎಂಬ ಹೆಸರೂ ಇದೆ.

ಈ ವಾಕ್ಯದಲ್ಲಿರುವ **ಷಡಾನನ** ಪದರಚನೆಯನ್ನು ಗಮನಿಸಿ

ಷಟ್+ಆನನ > ಷಡಾನನ

ಟ್+ಆ > ಡ್+ಆ

ಇಲ್ಲಿ ಪೂರ್ವ ಪದದ ಅಂತ್ಯದಲ್ಲಿರುವ ಟ (ವರ್ಗದ ಪ್ರಥಮಾಕ್ಷರಕ್ಕೆ) ಕಾರಕ್ಕೆ ಉತ್ತರ ಪದದ ಆದಿಯಲ್ಲಿರುವ ಆ ಕಾರವು ಪರವಾಗಿ ಸಂಧಿಯಾದಾಗ ಡ ಕಾರ(ಅದೇ ವರ್ಗದ ತೃತೀಯಾಕ್ಷರ) ಆದೇಶವಾಗಿ ಬಂದಿದೆ.

- ಸೂತ್ರ: ಪೂರ್ವಪದದ ಕೊನೆಯಲ್ಲಿರುವ ವರ್ಗದ ಪ್ರಥಮಾಕ್ಷರಕ್ಕೆ ಅಂದರೆ ಕ್,ಚ್,ಟ್,ತ್,ಪ್‌ಗಳಿಗೆ ಯಾವ ವರ್ಣ ಪರವಾದರೂ ಅದೇ ವರ್ಗದ ಮೂರನೇ ವ್ಯಂಜನಾಕ್ಷರಗಳಾದ ಗ್,ಜ್,ಡ್,ದ್,ಬ್ ಗಳು ಆದೇಶವಾಗಿ ಬರುವುದಕ್ಕೆ ಜಶ್ತ್ವ ಸಂಧಿ ಎನ್ನುವರು

ಉದಾ: ಸದಾನಂದ, ಅಬ್ಧಿ, ದಿಗಂತ, ಸದಾನಂದ,ವಾಗ್ದೇವಿ,ಅಜಂತ,ಷಡಂಗ,ಚಿದಾನಂದ ಇತ್ಯಾದಿ

- **ಶ್ಚುತ್ವ ಸಂಧಿ:**

ಮನವನಿಗೆ ಮನಶ್ಶುದ್ಧಿ ಇರಬೇಕು

ಈ ವಾಕ್ಯದಲ್ಲಿರುವ ಮನಶ್ಶುದ್ಧಿ ಪದರಚನೆಯನ್ನು ಗಮನಿಸಿ

ಮನಸ್+ಶುದ್ಧಿ > ಮನಶ್ಶುದ್ಧಿ

ಸ್+ಶ್+ಉ > ಶ್+ಶ್+ಉ

ಇಲ್ಲಿ ಪೂರ್ವ ಪದದ ಅಂತ್ಯದಲ್ಲಿರುವ ಸ ಕಾರಕ್ಕೆ ಉತ್ತರ ಪದದ ಆದಿಯಲ್ಲಿರುವ ಶ ಕಾರವು ಪರವಾಗಿ ಸಂಧಿಯಾದಾಗ ಪೂರ್ವ ಪದದ ಅಂತ್ಯದಲ್ಲಿರುವ ಸ ಕಾರಕ್ಕೆ ಶ ಕಾರ ಆದೇಶವಾಗಿ ಬಂದಿದೆ.

- ಸೂತ್ರ : ಸ್ ಕಾರ,ತ್ ವರ್ಗಾಕ್ಷರಗಳಿಗೆ ಶ್ ಕಾರ ಚ್ ವರ್ಗಾಕ್ಷರಗಳು ಪರವಾದಾಗ ಸ್ ಕಾರಕ್ಕೆ ಶ್ ಕಾರವೂ ತ್ ವ ರ್ಗ(ತ್,ಥ್,ದ್,ಧ್,ನ್)ಗಳಿಗೆ ಚ್ ವರ್ಗ(ಚ್,ಛ್,ಜ್,ಜ್,ಞ್)ಗಳು ಆದೇಶವಾಗಿ ಬರುವುದಕ್ಕೆ ಶ್ಚುತ್ವಸಂದಿ ಎನ್ನುವರು.

ಉದಾ: ಮನಶ್ಚಂಚಲ, ಜಗಜ್ಜ್ಯೋತಿ, ಚಲಚ್ಚಿತ್ರ, ಶರಚ್ಚಂದ್ರ , ಸಚ್ಚಿತ್ರ ,ಬೃಹಜ್ಜ್ಯೋತಿ.

- **ಅನುನಾಸಿಕ ಸಂಧಿ:**

ಅನುನಾಸಿಕ ಅಕ್ಷರಗಳಾದ ಙ್ ಞ್,ಣ್,ನ್.ಮ್ ವ್ಯಂಜನಗಳು ಆದೇಶವಾಗಿ ಬರುವ ಸಂಧಿಗಳೇ ಅನುನಾಸಿಕ ಸಂಧಿ

ಉದಾ: ವಾಕ್+ಮಯ > ವಾಙ್ಮಯ

ಕ್+ಮ್+ಅ > ಙ್+ಮ್+ಅ

ಇಲ್ಲಿ ಪೂರ್ವ ಪದದ ಅಂತ್ಯದಲ್ಲಿರುವ ಕ ಕಾರಕ್ಕೆ ಉತ್ತರ ಪದದ ಆದಿಯಲ್ಲಿರುವ ಮ ಕಾರವು ಪರವಾಗಿ ಸಂಧಿಯಾದಾಗ ಕ ಕಾರದ ಬದಲಿಗೆ ಅದೇ ವರ್ಗದ ಅನುನಾಸಿಕ ಅಕ್ಷರ ಙ ಕಾರ ಆದೇಶವಾಗಿ ಬಂದಿದೆ.

–ಸೂತ್ರ :ವರ್ಗದ ಪ್ರಥಮಾಕ್ಷರ ಗಳಿಗೆ (ಕ್,ಚ್,ಟ್,ತ್,ಪ್) ಯಾವುದೇ ಅನುನಾಸಿಕ ಅಕ್ಷರಗಳು ಪರವಾದರೂ ಅವುಗಳಿಗೆ ಅಂದರೆ ವರ್ಗದ ಪ್ರಥಮಾಕ್ಷರ ಗಳಿಗೆ ಅದೇ ವರ್ಗದ ಅನುನಾಸಿಕ ಅಕ್ಷರಗಳು (ಙ,ಞ,ಣ,ನ,ಮ) ಗಳು ಆದೇಶವಾಗಿ ಬರುತ್ತವೆ ಇದಕ್ಕೆ ಅನುನಾಸಿಕ ಸಂಧಿ ಎನ್ನುವರು

ಉದಾ: ಸನ್ಮಣಿ,ತನ್ಮಯ,ಉನ್ಮದ ದಿಙ್ಮೂಢ. ಷಣ್ಮಾಸ, ಚಿನ್ಮಯ, ಷಣ್ಮುಖ ,ಉನ್ಮಾದ

- **ಸಮಾಸಗಳು:**

  ಮೈಸೂರಿನ ಅರಮನೆ ಸುಂದರವಾಗಿದೆ

  ಹುಣಸೆ ಮರದಲ್ಲಿ ಹೆಜ್ಜೇನು ಗೂಡು ಕಟ್ಟಿದೆ

ಈ ಎರಡು ವಕ್ಯಗಳಲ್ಲಿರುವ **ಅರಮನೆ , ಹೆಜ್ಜೇನು** ಎಂಬ ಎರಡು ಪದಗಳನ್ನು ಗಮನಿಸಿದಾಗ **ಅರಮನೆ** ಎಂಬ ಪದ **ಅರಸನ ಮನೆ** ಎಂಬ ಅರ್ಥವನ್ನೂ **ಹೆಜ್ಜೇನು** ಎಂಬ ಪದ **'ಹಿರಿದಾದ ಜೇನು'** ಎಂಬ ಅರ್ಥವನ್ನೂ ಕೊಡುವ ಪದಗಳೆಂದು ತಿಳಿದು ಬರುತ್ತದೆ.

ಹೀಗೆ ಎರಡು ಅಥವಾ ಎರಡಕ್ಕಿಂತ ಹೆಚ್ಚು ಪದಗಳು ಅರ್ಥಕ್ಕೆ ಅನುಸಾರವಾಗಿ ಸೇರಿ ಪೂರ್ವಪದದ ಅಂತ್ಯದಲ್ಲಿ ವಿಭಕ್ತಿ ಪ್ರತ್ಯಯ ಇದ್ದರೆ ಅದು ಲೋಪವಾಗಿ ಒಂದು ಪದವಾಗುವುದೇ ಸಮಾಸ.

ಸಮಾಸದಲ್ಲಿ ಬರುವ ಮೊದಲನೆ ಪದವು ಪೂರ್ವಪದವೆಂದೂ ನಂತರ ಬರುವ ಪದವನ್ನು ಉತ್ತರ ಪದವೆಂದೂ ಕರೆಯುವರು. ಸಮಸ್ತ ಪದವನ್ನು ಬಿಡಿಸಿ ಬರೆಯುವುದಕ್ಕೆ ವಿಗ್ರಹವಾಕ್ಯ ಎನ್ನುವರು.

ಪೂರ್ವಪದ+ ಉತ್ತರ ಪದ = ವಿಗ್ರಹವಾಕ್ಯ

ಚಳಿಯ+ಕಾಲ= ಚಲಿಗಾಲ

ಹಿರಿದಾದ+ ಜೇನು= ಹೆಜ್ಜೇನು

## ಕನ್ನಡದಲ್ಲಿ ಒಟ್ಟು ಎಂಟು ಸಮಾಸಗಳಿವೆ ಅವುಗಳೆಂದರೆ

**1) ತತ್ಪುರುಷ ಸಮಾಸ 2) ಕರ್ಮಧಾರೆಯ ಸಮಾಸ 3) ದ್ವಿಗುಸಮಾಸ 4) ದ್ವಂದ್ವಸಮಾಸ 5) ಕ್ರಿಯಾ ಸಮಾಸ 6) ಅಂಶಿಸಮಾಸ 7) ಬಹುವ್ರೀಹಿಸಮಾಸ 8) ಗಮಕಸಮಾಸ**

- **ತತ್ಪುರುಷ ಸಮಾಸ**

  ಹಗಲಿನಲ್ಲಿ+ಕನಸು= ಹಗಲುಗನಸು (ಸಪ್ತಮೀ ತತ್ಪುರುಷ)

  ಬೆಟ್ಟದ+ತಾವರೆ =ಬೆಟ್ಟದಾವರೆ (ಷಷ್ಠೀ ತತ್ಪುರುಷ)

  ವಯೋಽಸ್ಸಿನಿಂದ+ವೃದ್ಧ= ವಯೋವೃದ್ಧ (ತೃತೀಯಾ ತತ್ಪುರುಷ)

ಕೊಟ್ಟಿರುವ ಪದಗಳನ್ನು ಗಮನಿಸಿದಾಗ ಎರೆಡೆರಡು ಪದಗಳು ಸೇರಿ ಒಂದು ಪದವಾಗಿರುವುದು,ಪೂರ್ವ ಪದದ ಅಂತ್ಯದಲ್ಲಿ ವಿಭಕ್ತಿ ಪ್ರತ್ಯಯವಿದ್ದು ಸಮಾಸವಾಗುವಾಗ ಆಪ್ರತ್ಯಯಗಳು ಲೋಪವಾಗಿರುವುದು ಕಂಡು ಬರುತ್ತದೆ.ಯಾವ ವಿಭಕ್ತಿ ಪ್ರತ್ಯಯ ಲೋಪವಾಗಿದೆಯೋ ಅದರ ಆಧಾರದಿಂದ ಸಮಾಸವನ್ನು ಹೆಸರಿಸುವರು.

–ಸೂತ್ರ : ಪೂರ್ವೋತ್ತರ ಪದಗಳು ನಾಮಪದಗಳಾಗಿದ್ದು ಪೂರ್ವ ಪದದ ಅಂತ್ಯದಲ್ಲಿರುವ ವಿಭಕ್ತಿ ಪ್ರತ್ಯಯ ಸಮಾಸವಾಗುವಾಗ ಲೋಪವಾದರೆ ಅದೇ ತತ್ಪುರುಷ ಸಮಾಸ.ಇದರಲ್ಲಿ ಉತ್ತರ ಪದದ ಅರ್ಥ ಪ್ರಧಾನ

ಉದಾ: ಬೆಟ್ಟದಾವರೆ, ತಲೆನೋವು, ಸ್ವಾಮಿದ್ರೋಹ, ಪರಧನ, ಧನಹರಣ, ಮದಾಂಧ, ಇನತನೂಜ, ಮೇದಿನೀಪತಿ, ಪೂದೋಟ , ರಾಜ್ಯರಕ್ಷಣೆ, ಅರಮನೆ, ರಾಜಪುತ್ರಿ,

- ಕರ್ಮಧಾರೆಯ ಸಮಾಸ:

ಹೊಸದು+ಕನ್ನಡ=ಹೊಸಗನ್ನಡ ಚಿಕ್ಕದು+ಮಗು=ಚಿಕ್ಕಮಗು
ದಿವ್ಯವಾದ+ಪ್ರಕಾಶ=ದಿವ್ಯಪ್ರಕಾಶ ಕೆಂಪಾದ+ತಾವರೆ=ಕೆಂದಾವರೆ
ಕೆಂಪಾದ+ಅಕ್ಕಿ=ಕೆಂಪಕ್ಕಿ ಹಿರಿದು+ಮರ= ಹೆಮ್ಮರ

–ಸೂತ್ರ: "ಪೂರ್ವೋತ್ತರ ಪದಗಳು ಲಿಂಗ,ವಚನ,ವಿಭಕ್ತಿಗಳಿಂದ ಸಮಾನವಾಗಿದ್ದು ವಿಶೇಷಣ–ವಿಶೇಷ
ಸಂಬಂಧದಿಂದ ಕೂಡಿ ಆಗುವ ಸಮಾಸಕ್ಕೆ ಕರ್ಮಧಾರೆಯ ಸಮಾಸ ಎನ್ನುವರು.

ಉದಾ: ಕೇಸಕ್ಕಿ, ಮೆಲ್ನುಡಿ, ಪೆರ್ಬಯಕೆ, ಕೆನ್ನಾಲಿಗೆ, ಕೋಪಾರುಣ ನೇತ್ರ, ಸುಖಸ್ಪರ್ಷ, ಮೆಲ್ನುಡಿ, ದಿವ್ಯಪ್ರಕಾಶ
ಮೆಲ್ವಾತು, ಅತಿಕುಟಿಲ, ಪೆರ್ಮಗ, ಪೆರ್ಮರ, ಹೆಜ್ಜೇನು,

- ದ್ವಿಗುಸಮಾಸ

ಒಂದು + ಕಟ್ಟು = ಒಗ್ಗಟ್ಟು
ಎರಡು + ಮಡಿ = ಇಮ್ಮಡಿ
ಮೂರು + ಮಡಿ = ಮುಮ್ಮಡಿ

ಈ ಮೂರು ಸಮಾಸಗಳಲ್ಲಿ ಪೂರ್ವ ಪದ ಸಂಖ್ಯಾವಾಚಕಗಳಾಗಿದ್ದು ಉತ್ತರ ಪದ ನಾಮಪದ ದಿಂದ ಕೂಡಿವೆ
–ಸೂತ್ರ : "ಪೂರ್ವ ಪದವು ಸಂಖ್ಯಾವಾಚಕವಾಗಿದ್ದು ಉತ್ತರ ಪದದಲ್ಲಿರುವ ನಾಮಪದದೊಡನೆ ಸೇರಿ ಆಗುವ ಸಮಾಸವೇ ದ್ವಿಗು ಸಮಾಸ"
ಉದಾ : ಏಕಾಂಗ, ಸಪ್ತಸಾಗರ, ಇಕ್ಕೆಲ, ಏಕಾಕ್ಷ, ಪಂಚೇಂದ್ರಿಯಾ, ಷಟ್ಕೋನ, ಎಣ್ದೆಸೆ, ಸಪ್ತಲೋಕ,ಮೂಗಾವುದ, ಮುಕ್ಕಣ್ಣು, ಸಪ್ತಸ್ವರಗಳು,

- ದ್ವಂದ್ವಸಮಾಸ

ಕೆರೆಯೂ + ಕಟ್ಟೆಯೂ + ಬಾವಿಯೂ = ಕೆರೆಕಟ್ಟೆಬಾವಿಗಳು
ಗಿಡವೂ + ಮರವೂ + ಬಳ್ಳಿಯೂ = ಗಿಡಮರಬಳ್ಳಿಗಳು
ಗುಡುಗು + ಮಿಂಚು + ಸಿಡಿಲು = ಗುಡುಗುಮಿಂಚುಸಿಡಿಲುಗಳು

ಈ ಉದಾಹರಣೆಗಳನ್ನು ಗಮನಿಸಿದಾಗ ಬೇರೆ ಸಮಾಸಗಳಲ್ಲಿದ್ದಂತೆ ಪೂರ್ವ ಪದ ಉತ್ತರ ಪದ ಎಂಬ ವಿಭಾಗಗಳು ಇಲ್ಲವೆಂಬುದು ಗೋಚರವಾಗುತ್ತದೆ. ಅಲ್ಲದೆ ಅರ್ಥ ಪ್ರಾಧಾನ್ಯದಲ್ಲೂ ಒಂದೇ ಪದಕ್ಕೆ ಅಂದರೆ ಪೂರ್ವ ಪದ ಅಥವಾ ಉತ್ತರ ಪದಕ್ಕೆ ಸೀಮಿತವಾಗಿಲ್ಲದೆ ಎಲ್ಲ ಪದಗಳ ಅರ್ಥ ಪ್ರಧಾನವಾಗಿರುತ್ತದೆ.

–ಸೂತ್ರ : "ಎರಡು ಅಥವ ಅನೇಕ ನಾಮಪದಗಳು ಸಹಯೋಗ ತೋರುವಂತೆ ಸೇಸಮಾಸವಾಗುವಾಗ ಎಲ್ಲ ಪದಗಳ ಅರ್ಥವೂ ಪ್ರಧಾನವಾಗಿ ಇರುವ ಸಮಾಸಕ್ಕೆ ದ್ವಂದ್ವಸಮಾಸ ಎನ್ನುವರು"
ಉದಾ : ದೀನಾನಾಥ, ಆನೆ ಕುದುರೆ ಒಂಟೆ,ಕೆರೆಕುಂಟೆ, ಸುಖದುಃಖ ,ಅಣ್ಣತಮ್ಮಂದಿರು, ಕುರುಡಕುಂಟ, ಮಾದ್ರಮಾಗದಯಾದವರು, ಹನುಮಭೀಮರಾಮ,

- ಕ್ರಿಯಾ ಸಮಾಸ:

ಮನೆಯನ್ನು + ಕಟ್ಟಿದನು = ಮನೆ ಕಟ್ಟಿದನು

ಸೂತ್ರ : "ಪೂರ್ವ ಪದವು ಪ್ರಾಯಶಃ ದ್ವಿತಿಯಾಂತ ನಾಮಪದವಾಗಿದ್ದು ಉತ್ತರದಲ್ಲಿರುವ ಕ್ರಿಯೆಯೊಡನೆ ಸೇರಿ ಆಗುವ ಸಮಾಸವನ್ನು ಕ್ರಿಯಾ ಸಮಾಸ ಎನ್ನುವರು"

ಉದಾ: ಮೃಗವನಟ್ಟು, ನೀರ್ಗುಡಿಯಲ್, ತಲೆತಗ್ಗಿಸು, ಮುಡಿಕಟ್ಟು, ಉಡಿತುಂಬಿ, ತಲೆದೂಗಿದನು, ಅಸುಂಗೊಳೆ,
ಮೈಮುಟ್ಟು, ಕಣ್ದೆರೆ, ಕಂಗೆಡು, ಮೋಸಮಾಡು, ಬಲವಂದು, ಸಾಕ್ಷಿಮಾಡು, ಹೊಗೆದೋರು, ಸೊಲ್ಗೇಳಿ, ಬಿಲ್ದಿರುವನೇರಿಸಿ, ಕೈಕೊಳ್ವುದು, ಬಿಲ್ಗೊಂಡು

- ಬಹುವ್ರೀಹಿಸಮಾಸ

ಮೂರು ಕಣ್ಣು ಉಳ್ಳವನು = ಮುಕ್ಕಣ್ಣ (ಶಿವ)
ಹಣೆಯಲ್ಲಿ ಕಣ್ಣು ಉಳ್ಳವನು = ಹಣೆಗಣ್ಣ (ಶಿವ)

ಈ ಪದಗಳಲ್ಲಿ ಪೂರ್ವ ಪದದ ಅರ್ಥವಾಗಲೀ ಉತ್ತರ ಪದದ ಅರ್ಥವಾಗಲೀ ಪ್ರಧಾನವಾಗಿಲ್ಲದೆ ಬೇರೊಂದು ಪದವಾದ ಶಿವ ಪದದ ಅರ್ಥವೇ ಪ್ರಧಾನವಾಗಿದೆ.

- ಸೂತ್ರ : ಎರಡು ಅಥವ ಅನೇಕ ನಾಮಪದಗಳು ಸೇರಿ ಸಮಾಸವಾದಾಗ ಬೇರೋಂದು ಪದದ ಅರ್ಥವು ಪ್ರಧಾನವಾಗಿರುವ ಸಮಾಸವೇ ಬಹುವ್ರೀಹಿಸಮಾಸ.

ಉದಾ: ನಾಲ್ಕು ಮೊಗವುಳ್ಳವ =ನಾಲ್ಮೊಗ (ಬ್ರಹ್ಮ) ಕೆಂಪು ಕಣ್ಣುವುಳ್ಳವ =ಕೆಂಗಣ್ಣ(ಶಿವ)

ಚಕ್ರಪಾಣಿ, ಸಿಂಹಕೇತನ, ಉರಗಪತಾಕ, ಅಗಜಾತೆ, ಗಾಂಡೀವಿ, ಮಾರರಿಪು, ವಿಪಿನ ಚರ, ಕೆಂಗಣ್ಣ, ಫಾಲನೇತ್ರ, ಘಟಸಂಭೂತ, ಪವನನಂದನ, ದನುಜರಿಪು, ಮುರಾರಿ, ಚಕ್ರಪಾಣಿ,ಹಣೆಗಣ್ಣ, ಮುಕ್ಕಣ್ಣ,

- ಗಮಕಸಮಾಸ

ಅದು+ಮನೆ = ಆಮನೆ

ಇವನು+ಮನುಷ್ಯ = ಈ ಮನುಷ್ಯ

ಇಲ್ಲಿ ಪೂರ್ವಪದಗಳಾದ ಅದು ಮತ್ತು ಅವನು ಸರ್ವನಾಮಗಳಾಗಿದ್ದು,ಉತ್ತರ ಪದಗಳಾದ ಮನೆ ಮತ್ತು ಮನುಷ್ಯ ನಾಮಪದಗಳಾಗಿವೆ.

- ಸೂತ್ರ : "ಪೂರ್ವ ಪದವು ಸರ್ವನಾಮ ಅಥವಾ ಕೃದಂತಗಳಲ್ಲಿ ಒಂದಾಗಿದ್ದು ಉತ್ತರದಲ್ಲಿರುವ ನಾಮಪದದೊಡನೆ ಕೂಡಿ ಆಗುವ ಸಮಾಸವೇ ಗಮಕಸಮಾಸ ಎನ್ನುವರು"

ಉದಾ: ಈ ಹೆಂಗಸು ಆ ಊರು ಈ ನಾಯಿ, ಆ ಬೆಟ್ಟ, ತಿಂದನ್ನ, ಕಡೆಗೋಲು ಮಾಡಿದಡಿಗೆ, ಸಿಡಿಮದ್ದು, ಆ ಕಲ್ಲು, ಈ ಬೆಕ್ಕು, ನೆಯ್ದುವಸ್ತ್ರ,

- ಅಂಶಿಸಮಾಸ:

ಕಾಲ+ಮುಂದು=ಮುಂಗಾಲು ತಲೆಯ+ಮುಂದೆ=ಮುಂದಲೆ ಕೈಯ+ಅಡಿ=ಅಂಗೈ

ಈ ಉದಾಹರಣೆಗಳನ್ನು ಗಮನಿಸಿದಾಗ ಪೂರ್ವ ಪದ ಅನೇಕ ಅಂಶಗಳನ್ನು ಹೊಂದಿರುವ ಅಂಶಿಯೂ ಉತ್ತರ ಪದ ಅಂಶಿಯ ಒಂದು ಅಂಶವನ್ನೂ ಸೂಚಿಸುವುದು.

ಸೂತ್ರ : "ಪೂರ್ವ ಪದವು ಅಂಶವಾಚಕವಾಗಿಯೂ ಉತ್ತರಪದವು ಅಂಶಿವಾಚಕವಾಗಿಯೂ ಇದ್ದು ಪೂರ್ವಪದ ಅರ್ಥವು ಪ್ರಧಾನವಾಗಿರುವ ಸಮಾಸಕ್ಕೆ ಅಂಶಿಸಮಾಸ ಎನ್ನುವರು

ಉದಾ:

ಕಾಲ+ಅಡಿ=ಅಂಗಾಲು ಮೂಗಿನ+ತುದಿ=ತುದಿಮೂಗು ರಾತ್ರಿಯ+ನಡು=ನಡುರಾತ್ರಿ

ಮನೆಯ+ನಡು=ನಡುಮನೆ , ಮುಂಗೈ, ಕುಡಿಹುಬ್ಬು, ತುದಿಬೆಟ್ಟ, ಕೆಳದುಟಿ, ಒಳಮೈ, ತುದಿಬೆರಳು, ಅಂಗೈ, ಕಡೆಗಣ್ಣು,ಹಿಂದಲೆ,

- ವಾಕ್ಯ ರಚನಾವಿವರ:

ಮಾತು ಪದಗಳಿಂದ ಆರಂಭವಾಗುತ್ತದೆ.ಆದರೆ ಅದು ವಿಕಾಸಗೊಳ್ಳುವುದು ವಾಕ್ಯಗಳ ಮೂಲಕ ಹಾಗಾಗಿ ಪದಗಳ ಅರ್ಥಪೂರ್ಣ ಸಮೂಹವೇ ವಾಕ್ಯ.ಹಾಗೆಂದ ಮಾತ್ರಕ್ಕೆ ಅದೊಂದು ಪದಗಳ ಗುಂಪು

ಎಂದು ಹೇಳಲಾಗದು. ಆ ಪದಗಳು ಒಂದು ನಿರ್ದಿಷ್ಟ ರೀತಿಯಲ್ಲಿ (ಅರ್ಥವತ್ತಾದ) ಜೋಡಣೆಯಾದಾಗಮಾತ್ರ ವಾಕ್ಯ ಎನಿಸಿಕೊಳ್ಳುತ್ತದೆ.

ಈ ವಾಕ್ಯಗಳನ್ನು ಗಮನಿಸಿ

1) ಜಿಂಕೆ ಹುಲ್ಲನ್ನು ತಿಂದಿತು.

2) ರಾಮನಿಂದ ರಾವಣ ಕೊಲ್ಲಲ್ಪಟ್ಟನು.

ಈ ಎರಡೂ ವಾಕ್ಯಗಳು ಸಂಪೂರ್ಣ ಅರ್ಥವನ್ನು ಕೊಡುತ್ತವೆ.

ಇಲ್ಲಿ ಜಿಂಕೆ ಎಂಬುದು ಕರ್ತೃಪದ ಹುಲ್ಲು ಎಂಬುದು ಕರ್ಮಪದ ತಿಂದಿತು ಎಂಬುದು ಕ್ರಿಯಾಪದ. ಅರ್ಥಪೂರ್ಣ ವಾಕ್ಯ ಎಂದರೆ ಕರ್ತೃ ಕರ್ಮ ಕ್ರಿಯಾಪದಗಳಿಂದ ವ್ಯವಸ್ಥಿತವಾಗಿಕೂಡಿರುವ ಪದಸಮೂಹ. ಆದರೆ ಕೆಲವು ಕ್ರಿಯಾಪದಗಳು ಕರ್ಮಪದವನ್ನು ಅಪೇಕ್ಷಿಸುವುದಿಲ್ಲ. ಅಂತಹ ಕ್ರಿಯಾಪದದ ಜತೆಗೆ ಕರ್ತೃಪದ ಇದ್ದರೆ ಅರ್ಥಪೂರ್ಣ ವಾಕ್ಯವಾಗುತ್ತದೆ.

- **ವಾಕ್ಯ ಪ್ರಬೇಧಗಳು:**

ವಾಕ್ಯಗಳನ್ನು ಸಾಮಾನ್ಯ ವಾಕ್ಯ, ಸಂಯೋಜಿತ ವಾಕ್ಯ ಹಾಗೂ ಮಿಶ್ರ ವಾಕ್ಯ ಎಂದು ವಿಂಗಡಿಸಲಾಗಿದೆ.

- **ಸಾಮಾನ್ಯವಾಕ್ಯ :**

1) ಸುಬ್ರಹ್ಮಣ್ಯಮ್ ನಮ್ಮನ್ನು ವಿಶ್ವಾಸದಿಂದ ಸ್ವಾಗತಿಸಿದರು.

2) ಹಕ್ಕಿ ಹಣ್ಣನ್ನು ತಿನ್ನುತ್ತದೆ.

ಈ ಎರಡು ವಾಕ್ಯಗಳು ಒಂದೊಂದು ಪೂರ್ಣ ಕ್ರಿಯಾ ಪದದೊಡಗೂಡಿ ಸ್ವತಂತ್ರ ವಾಕ್ಯಗಳಾಗಿವೆ
ಹೀಗೆ ಒಂದು ಪೂರ್ಣ ಕ್ರಿಯಾಪದದೊಡನೆ ಸ್ವತಂತ್ರ ಖಚಿತ ಅರ್ಥಕೊಡುವ ವಾಕ್ಯಗಳೇ ಸಾಮಾನ್ಯ ವಾಕ್ಯಗಳು.

ಉದಾ:

1) ಹುಲಿಯನ್ನು ಕಂಡರೆ ಜಿಂಕೆಗಳಿಗೆ ಭಯ.

2) ನದಿ ಹರಿಯುತ್ತದೆ.

3) ನರಸಜ್ಜನ ಬಾಯಲ್ಲಿ ಒಂದು ಹಲ್ಲೂ ಇಲ್ಲ.

- **ಸಂಯೋಜಿತ ವಾಕ್ಯ/ಸಂಯುಕ್ತ ವಾಕ್ಯ:**

1. ಪಾಂಡವರ ಯಜ್ಞ ತುರಗ ಮಣಿಪುರವನ್ನು ಪ್ರವೇಶಿಸಿತು; ಆಗ ಬಬ್ರುವಾಹನನು ಅದನ್ನು ಕಟ್ಟಿಹಾಕಿದನು; ಆದ್ದರಿಂದ ಬಬ್ರುವಾಹನನಿಗೂ ಅರ್ಜುನನಿಗೂ ಯುದ್ಧ ನಡೆಯಿತು

# <u>ಸಂಧಿಗಳು</u>

## 01.ಲೋಪ ಸಂಧಿ:

ಪೂರ್ವಪದದ ಕೊನೆ ಸ್ವರ ಲೋಪ.

## 02.ಆಗಮ ಸಂಧಿ:

ಯ

ವ

## 03.ಆದೇಶ ಸಂಧಿ:

ಕ > ಗ

ತ > ದ

ಪ > ಬ

04.ಸವರ್ಣದೀರ್ಘ ಸಂಧಿ:

ಅಆ > ಆ

ಇಈ > ಈ

ಉಊ > ಊ

05.ಗುಣ ಸಂಧಿ:

ಅಆ > ಇಈ = ಏ

ಅಆ > ಉಊ = ಓ

ಅಆ > ಋ = ಅರ್

06.ವೃದ್ಧಿ ಸಂಧಿ:

ಅಆ > ಏಐ = ಐ

ಅಆ > ಓಔ = ಔ

07.ಯಣ್ ಸಂಧಿ:

ಇಈ >ಸವರ್ಣ = ಯ

ಉಊ >ವಲ್ಲದ = ವ

ಋ > ಸ್ವರ = ರ

## 08.ಜಶ್ತ್ವ ಸಂಧಿ:

| | | |
|---|---|---|
| ಕ | > | ಗ |
| ಚ | > | ಜ |
| ಟ | > | ಡ |
| ತ | > | ದ |
| ಪ | > | ಬ |

## 09.ಶ್ಚುತ್ವ ಸಂಧಿ:

ಸ ಕಾರ > ಶ ಕಾರ= ಶ ಕಾರ

ತ ವರ್ಗ > ಚವರ್ಗ= ಚ ವರ್ಗ

## 10.ಅನುನಾಸಿಕ ಸಂಧಿ:

| | | |
|---|---|---|
| ಕ | ಅ | ಙ |
| ಚ | ನು | ಞ |
| ಟ | ನಾ | ಣ |
| ತ | ಸಿ | ನ |
| ಪ | ಕ | ಮ |

# ಸಮಾಸಗಳು

**01.ತತ್ಪುರುಷ ಸಮಾಸ:**

ಉತ್ತರ ಪದದ ಅರ್ಥ ಪ್ರಧಾನ.

ಉದಾ:ಅರಮನೆ.

**02.ಕರ್ಮಧಾರಯ ಸಮಾಸ:**

ಪೂರ್ವ ಪದ ವಿಶೇಷಣ.

ಉದಾ:ಹೆಮ್ಮರ.

**03.ದ್ವಿಗು ಸಮಾಸ:**

ಪೂರ್ವ ಪದ ಸಂಖ್ಯಾವಾಚಕ.

ಉದಾ:ನವರಾತ್ರಿ.

**04.ದ್ವಂದ್ವ ಸಮಾಸ:**

ಎಲ್ಲ ಪದಗಳ ಅರ್ಥ ಪ್ರಧಾನ.

ಉದಾ:ಮರಗಿಡಬಳ್ಳಿಗಳು.

**05.ಅಂಶಿ ಸಮಾಸ:**

ಪೂರ್ವ ಪದದ ಅರ್ಥ ಪ್ರಧಾನ.

ಉದಾ:ಮುಂದಲೆ.

**06.ಬಹುವ್ರಿಹಿ ಸಮಾಸ:**

ಅನ್ಯ ಪದದ ಅರ್ಥ ಪ್ರಧಾನ.

ಉದಾ:ಚಕ್ರಪಾಣಿ.

## 07.ಕ್ರಿಯಾ ಸಮಾಸ:

ಉತ್ತರ ಪದ ಕ್ರಿಯಾಪದ.

ಉದಾ:ಮೋಸಮಾಡು.

## 08.ಗಮಕ ಸಮಾಸ:

ಪೂರ್ವಪದ ಧಾತು,ಸರ್ವನಾಮ.

ಉದಾ:ಸಿಡಿಮದ್ದು,ಆ ಹುಡುಗ.